ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 26 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 219 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಲೇಖಕರಿಗಿಂತ ಪ್ರಕಾಶಕರ ಪಾತ್ರ ಪ್ರಮುಖವಾದುದು

●ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್ ಅಭಿಮತ ●ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ ಉದ್ಘಾಟನೆ



"ಸಮಾಜದಲ್ಲಿ ಯಾವುದೇ ಪ್ರಶಸ್ತಿಗಳನ್ನು ನೀಡಿದರು ಅದನ್ನು ಪತ್ರಕರ್ತರು, ಲೇಖಕರು, ಸಿನಿಮಾ ಸಾಧಕರಿಗೆ ನೀಡಿ. ಏಕೆಂದರೆ ಸಮಾಜವನ್ನು ತಿದ್ದುವ ಕೆಲಸವನ್ನು ಅವರ ವೃತ್ತಿಯ ಮೂಲಕ ಮಾಡುತ್ತಾರೆ. ಅದರಂತೆ ಹಿರಿಯ ಸಾಹಿತಿಗಳಾದ ಸಿಪಿಕೆ ಅವರು 400ಕ್ಕೂ ಅಧಿಕ ಪುಸ್ತಕಗಳನ್ನು ಬರೆದಿದ್ದು, ಅದರೊಟ್ಟಿಗೆ ಸಾವಿರಾರು ಲೇಖನಗಳನ್ನು ಬರೆದಿದ್ದಾರೆ. ಇದನ್ನು ನಾನು ಗಮನಿಸಿ ಇತ್ತೀಚೆಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಿಪಿಕೆ ಅವರಿಗೆ ಪಂಪ ಪ್ರಶಸ್ತಿ ನೀಡುವಂತೆ ಮನವಿ ಮಾಡಿದ್ದೇನೆ.

–ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯ

ಮೈಸೂರು, ನ.25(ಜಿಎ)– ಪ್ರಕಾಶಕರು ಎಂದರೆ ಹಣ ಮಾಡುವವರಲ್ಲ, ಅರಿವಿನ ಲೋಕ ವಿಸ್ತರಿಸುವ ವ್ಯವಸಾಯಗಾರರಂತೆ. ಲೇಖಕರಿಗಿಂತ ದೊಡ್ಡ ಮಟ್ಟದಲ್ಲಿ ಪ್ರಕಾಶಕರು ಕೆಲಸ ಮಾಡುತ್ತಾರೆ ಎಂದು ಮಹಾರಾಣಿ ಕಲಾ ಕಾಲೇಜಿನ ಪ್ರಾಧ್ಯಾಪಕ ಡಾ.ಬಿ.ವಿ. ವಸಂತಕುಮಾರ್ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆ ರೋಟರಿ ಸಭಾಂಗಣದಲ್ಲಿ ಶುಕ್ರವಾರ ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ಉದ್ಘಾಟನೆ ಮತ್ತು ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪುಸ್ತಕ ಪ್ರಕಾಶಕರ ಸಂಘವು ಮಾರಾಟಕ್ಕೆ ಸೀಮಿತವಾಗದೆ ಅಕ್ಷರ ಬಿತ್ತಿ ಅಕ್ಷರ ಬೆಳೆ ತೆಗೆಯುವ ಬೆಳೆಯುವ ಸಂಘವಾಗಬೇಕು. ಪ್ರತಿ ವರ್ಷ 8 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಲೇಖಕರು ಬರೆಯುತ್ತಾರೆ. ಆದರೆ 4 ಸಾವಿರ ಪುಸ್ತಕಗಳು ಮಾತ್ರ ಮುದ್ರಣಕ್ಕೆ ಆಯ್ಕೆಯಾಗಿ ಪ್ರಕಟವಾಗುತ್ತವೆ. ಪುಸ್ತಕಗಳ ಮೂಲಕ ಲೇಖಕರು ಬದುಕಿನ ತೀವ್ರತೆಯನ್ನು ಸಮಾಜಕ್ಕೆ ತಿಳಿಸುತ್ತಾರೆ. ಅನೇಕ ಕಡೆ ಮಾರಾಟದ ವ್ಯವಸ್ಥೆಯಲ್ಲಿ ಇಲ್ಲದ ಕಾರಣ ಓದುಗರು ಗ್ರಂಥಾಲಯ ಅವಲಂಬಿಸುತ್ತಿದ್ದಾರೆ ಎಂದರು.

ಸರ್ಕಾರವೇ 10 ಕೋಟಿ ರೂ. ಮೌಲ್ಯದ ಪುಸ್ತಕವನ್ನು ಖರೀದಿಸಿ ಗ್ರಂಥಾಲಯಕ್ಕೆ ಕೊಡಬಹುದು ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪುಸ್ತಕಗಳು ಮತ್ತು ಪತ್ರಿಕೆಗಳಿಗೆ ಅವಿನಾಭಾವ ಸಂಬಂಧವಿದ್ದು, ಪ್ರತಿ ವಾರವು ಲೇಖಕರಿಗಾಗಿ ಒಂದು ಪುರವಣಿಯನ್ನು ಅನೇಕ ಪತ್ರಿಕೆಗಳಲ್ಲಿ ಮೀಸಲಿಡುತ್ತಾರೆ. ಆದರೆ, ಲೇಖಕರಿಗೆ ಯಾವುದೇ ಸಮಯದ ಒತ್ತಡವಿರುವುದಿಲ್ಲ. ಪತ್ರಕರ್ತರಿಗೆ ಸಮಯದ ಒತ್ತಡವಿರುವುದರಿಂದ ಅವರು ಸಹ ಅವಸರದ ಸಾಹಿತಿಗಳಾಗಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸುವ ಗ್ರಂಥಾಲಯ ಸೆಸ್‌ಗಳನ್ನು ಸ್ಥಳೀಯ ಗ್ರಂಥಾಲಯಗಳೇ ಬಳಸಿಕೊಳ್ಳಲು ಸರ್ಕಾರ ಅವಕಾಶ ಮಾಡಿಕೊಡಬೇಕು ಎಂದರು. ಕಾರ್ಯಕ್ರಮದಲ್ಲಿ ಸಾಹಿತಿ ಸಿ.ಪಿ. ಕೃಷ್ಣಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಎಡಿಸಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಸಂಘದ ಅಧ್ಯಕ್ಷ ಡಿ.ಎನ್. ಲೋಕಪ್ಪ, ಉಪಾಧ್ಯಕ್ಷರಾದ ನಟರಾಜ ಚೌಧರಿ, ಪ್ರಧಾನ ಕಾರ್ಯದರ್ಶಿ ಮಾನಸ, ಕಾರ್ಯದರ್ಶಿ ಯು.ಎಸ್. ಮಹೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 26 ಶನಿವಾರ 2022

₹4

ಸಂಪುಟ: 43 | ಸಂಚಿಕೆ: 219 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಮಾವ : (ಅಳಿಯನಾಗುವವನಿಗೆ) ತಾವು ಡ್ರಿಂಕ್ಸ್ ತಗೊಳ್ಳೋ ಅಭ್ಯಾಸ ಇದೆಯೇ?

ಭಾವಿ ಅಳಿಯ : ಮೊದಲು ಇದನ್ನು ಹೇಳಿ. ನೀವು ಹಾಕ್ತಿರೋದು ಪ್ರಶ್ನೇನೋ ಅಥವಾ ಕುಡಿಯೋಕೆ ಆಹ್ವಾನವೋ?!"

ಮೈಸೂರು ಮಿತ್ರ

ಶನಿವಾರ, 26 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತನ್ನ ಗಂಡನ ಕೀರ್ತಿಗೆ ಕಳಂಕ ಬಾರದಂತೆ ಕಾಪಾಡುವುದು ಹೆಂಡತಿಯ ಧರ್ಮ. ಅದಕ್ಕಾಗಿ ಅವಳು ಸುಳ್ಳು ಹೇಳುವುದರಲ್ಲಿ ತಪ್ಪಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜನಕ್ಕಂಜದಿದ್ದರೂ ಮನಕ್ಕಂಜು

ನಿಮ್ಮ ಪತ್ರಗಳು

ನಗುವಿನೊಂದಿಗೆ ನೋವುಗಳು ಮರೆಯಾಗಲಿ!

ಮಾನ್ಯರೆ,

ಡಿವಿಜಿ ಯವರ ಅಭಿಪ್ರಾಯದಂತೆ "ಮಾನವನ ನಗುವೊಂದು ಸಹಜ ಧರ್ಮ, ಅನ್ಯರನ್ನು ನಗಿಸುವುದು ಪರಧರ್ಮ, ನಗುವನ್ನು ಕೇಳಿ ನಗುವುದು ಅತಿಶಯ ಧರ್ಮ. ಆದುದರಿಂದ ದೇವರಲ್ಲಿ ನಗುವ, ನಗಿಸುವ, ನಗಿಸಿ, ನಗುತ ಬಾಳುವವರನ್ನು ನೀನು ಬೇಡಿಕೊ ಎಂದು ನಗುವಿನಲ್ಲಿರುವ ಅದಮ್ಯ ಶಕ್ತಿಯನ್ನು ಕುರಿತು ಕಗ್ಗದಲ್ಲಿ ಹೇಳಿದ್ದಾರೆ. ಇಂದಿನ ಒತ್ತಡದ ಬದುಕಿನಲ್ಲಿ ನಗು ಬಹು ಮುಖ್ಯ. ಅದು ಜೀವನದ ಜಂಜಾಟದಿಂದ ಕೆಲ ಹೊತ್ತಾದರೂ ನಮ್ಮನ್ನು ಹಗುರಗೊಳಿಸುತ್ತದೆ ಎಂಬುದನ್ನು ಮರೆಯಬಾರದು. ಕೆಲವರಂತೂ ಮುಖವನ್ನು ಯಾವಾಗಲೂ ಸಿಂಡರಿಸಿ, ಗಂಟಾಕಿಕೊಂಡು ಆಕಾಶವೇ ತಲೆಯ ಮೇಲೆ ಬಿದ್ದವರಂತೆ ಇರುತ್ತಾರೆ. ಇವರನ್ನು ನೋಡಿದರಂತೂ ನೋಡಿದವರಿಗೆ ಜಿಗುಪ್ಸೆ ಉಂಟಾಗುತ್ತದೆ. ಕೇವಲ 5 ನಿಮಿಷದ ನಮ್ಮ ನಗು, ನಮ್ಮ ದೇಹದ ಮಾಂಸ ಖಂಡಗಳನ್ನು ಸುಮಾರು 45 ನಿಮಿಷ ವಿಶ್ರಾಂತಿ ಸ್ಥಿತಿಗೆ ತಲುಪಿಸುತ್ತದೆ. ಹೀಗೆಂದು ಒಂದು ಪ್ರಾಯೋಗಿಕ ಅಧ್ಯಯನವೇ ತಿಳಿಸಿದೆ. ಬದುಕಿನ "ಜೀವಸೆಲೆ" ನಗುವಿನಲ್ಲಿದೆ. ನಗುವಿನ ಹೊನಲಿಲ್ಲದ ಬದುಕು ಬೆಂಗಾಡಿನಂತೆ. ನಗು ನಗುತಾ ಮಾಡುವ ಕೆಲಸ ಯಶಸ್ಸು ಸಾಧಿಸುವುದು, ಅಂದರೆ ನಗುವಿನ ಹಿರಿಮೆ–ಮಹಿಮೆ ಅಂತಹದ್ದಿದೆ ಎಂಬುದನ್ನು ಇಂದಿನ ಸಮಾಜ ಅರಿಯಬೇಕು. ವೈಜ್ಞಾನಿಕವಾಗಿ ನಗುವಿನಿಂದಲೇ ಆರೋಗ್ಯ ಉತ್ತಮಗೊಳ್ಳುತ್ತದೆ ಎಂಬುದು ಅಕ್ಷರಶಃ ಸತ್ಯವಾದುದು. ನಗುವೇ ಜೀವನ, ನಮ್ಮ ಮುಖದಲ್ಲಿ ನಗು ಎಷ್ಟಿರಬೇಕೆಂದರೆ ನಮ್ಮನ್ನು ಹುಡುಕಿ ಬರುವ ಕಷ್ಟಗಳು, ನಾವು ತಪ್ಪು ವಿಳಾಸಕ್ಕೆ ಬಂದಿದ್ದೇವೆ ಎಂದು ತಿಳಿದು ಹೇಳದೆ, ಕೇಳದೆ ಪಲಾಯನ ಮಾಡುವಂತಿರಬೇಕು....!!! ಬಡತನವಿರುವುದು ಬದುಕಿಗೆ ಹೊರತು ನಗುವಿಗಲ್ಲ....!!! ಸುಂದರವಾಗಿ ಕಾಣಲು ಬಣ್ಣ, ಬಣ್ಣದ ಉಡುಪು, ಮೇಕಪ್‌ನ ಅಗತ್ಯವಿಲ್ಲ. ಮುಗುಳ್ನಗೆ ಒಂದಿದ್ದರೆ ಅದು ಎಲ್ಲ ದುಃಖವನ್ನು ಮರೆಸುತ್ತದೆ. ನಗುತಿರು ನಿನ್ನ ಬಗ್ಗೆ ಚಿಂತಿಸದ ಜನಗಳ ನಡುವೆ, ನಿನ್ನ ಭಾವನೆಗಳನ್ನೇಕೆ ಹರಿಬಿಡುವೆ ಕಷ್ಟವಾದರೂ ಎಲ್ಲವ ಸಹಿಸಿ ನಗುತಿರು, ಕೆಲವರ ಮುಖದಲ್ಲಿ ಮುಗುಳ್ನಗೆಯನ್ನು ನೋಡುತ್ತಿದ್ದರೆ, ಬೆಟ್ಟದಷ್ಟು ಕಷ್ಟವಿದ್ದರೂ ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತದೆ. ನಗುವಿಗೆ ದುಡ್ಡು ಕೊಡಬೇಕೆ, ನೋವು ಕ್ಷಣಿಕ. ಕಷ್ಟ ಇಂದು ಬರುತ್ತದೆ, ನಾಳೆ ಹೋಗುತ್ತದೆ, ನಗುವಿನೊಂದಿಗೆ ನೋವುಗಳು ಮರೆಯಾಗಲಿ, ಸರ್ವ ರೋಗಕ್ಕೂ ನಗುವೇ ಮದ್ದು, ನಕ್ಕರೆ ಅದೇ ಸ್ವರ್ಗ, ಇದನ್ನು ತಿಳಿದು ಯಾವಾಗಲೂ ನಗುತ್ತಿರಿ ನಿಮ್ಮ ಜೊತೆಯಲ್ಲಿರುವವರನ್ನು ನಗಿಸುತ್ತಿದ್ದರೆ ಬಾಳು ಬಂಗಾರವಾಗುತ್ತದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಬೆಲೆ ಏರಿಕೆ ಬೇಡ

ಮಾನ್ಯರೆ,

ಹಾಲಿನ ಬೆಲೆ ಏರಿಕೆ ಸುದ್ದಿಯು ನಮ್ಮಂತಹ ಬಡವರ ನಿದ್ದೆ ಕೆಡಿಸಿದೆ. ಈಗಾಗಲೇ ತುಟ್ಟಿ ಜೀವನ ವೆಚ್ಚದಿಂದ ಬಡವರ ಜೀವನ ದಿಕ್ಕಪಾಲಾಗಿದೆ. ದೊಡ್ಡವರಿಗಲ್ಲದಿದ್ದರೂ ಮಕ್ಕಳಿಗೆ ಹಾಲು ಅವಶ್ಯವಾಗಿದೆ. ತಯಾರಿಕೆ ವೆಚ್ಚ ಹೆಚ್ಚು ಅದಕ್ಕೆ ಹೆಚ್ಚಿಸುತ್ತಿದ್ದೇವೆ ಎಂಬುದು ಸಕಾರಣವಲ್ಲ. ಸಂಸ್ಥೆಯಲ್ಲಿ ವೆಚ್ಚ ಕಡಿಮೆ ಮಾಡುವುದರಿಂದ, ಹೊಸಬರನ್ನು ನೇಮಕ ಮಾಡುವುದನ್ನು ನಿಲ್ಲಿಸುವುದರಿಂದ ಇದನ್ನು ತಡೆಯಬಹುದು. ಅಧ್ಯಕ್ಷರು ಮುಂತಾದವರ ಹುದ್ದೆಗಳನ್ನು ಗೌರವಾನ್ವಿತ ಎಂದು ಪರಿಗಣಿಸಲಿ. ಅವರು ಸಂಬಳ ಸಾರಿಗೆ, ಕಾರುಗಳು ಮುಂತಾದವನ್ನು ತ್ಯಾಗ ಮಾಡಿದರೆ ಕೋಟಿಗಟ್ಟಲೆ ಅನಗತ್ಯ ವೆಚ್ಚ ಉಳಿಯುತ್ತದೆ. ಅದನ್ನೇ ರೈತರಿಗೆ ನೀಡಬಹುದು. ಬೇರೆ ರಾಜ್ಯವನ್ನು ಮಾದರಿಯಾಗಿ ತೆಗೆದುಕೊಳ್ಳುವುದು ಬೇಡ. ಸರ್ಕಾರಿ ಕಾರ್ಯಗಳು ಶ್ರೀಸಾಮಾನ್ಯ ಸ್ನೇಹಿಯಾಗಿರಬೇಕೇ ವಿನಃ ಅವರ ಮೇಲೆ ಬೆಲೆ ಹೆಚ್ಚು ಎಂಬ ಬರೇ ಹಾಕುವುದು ಸಲ್ಲದು. ಹಾಲಿನ ಬೆಲೆ ಹೆಚ್ಚಿಸಬಾರದೆಂದು ಈ ಮೂಲಕ ಮನವಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ರೈಲ್ವೆ ಕೆಳಸೇತುವೆ ಪಾದಚಾರಿ ದುರಸ್ತಿಪಡಿಸಿ

ಮಾನ್ಯರೆ,



ಮೈಸೂರು ಮಹಾರಾಜ ಕಾಲೇಜಿನ ಬಳಿ ಇರುವ ವೃತ್ತದಿಂದ ಅಗ್ನಿಶಾಮಕ ದಳದ ಕಚೇರಿವರೆಗೆ ಇರುವ ರೈಲ್ವೆ ಕೆಳಸೇತುವೆಯ ಪಾದಚಾರಿ ಮಾರ್ಗಕ್ಕೆ ನೂರಾರು ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ ಎರಡೂ ಕಡೆ ಹಲವಾರು ಚಪ್ಪಡಿಗಳು ಒಡೆದು ಹಾಳಾಗಿ ಹೊಂಡದ ರೀತಿಯಾಗಿ ಮತ್ತೆ ಕೆಲವು ಸಡಿಲಗೊಂಡಿವೆ ಹೀಗಾಗಿ, ಇದು ಈ ಮಾರ್ಗವಾಗಿ ಓಡಾಡುವ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಬಹಳ ಕಿರಿಕಿರಿಯಾಗಿ ಪರಿಣಮಿಸಿದೆ. ರಾತ್ರಿ ವೇಳೆಯಂತು ಇದು ಕಾಣಿಸದಿರುವುದರಿಂದ ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರು ಎಚ್ಚೆತ್ತು ಇವುಗಳನ್ನು ದುರಸ್ತಿಗೊಳಿಸಲು ಕ್ರಮವಹಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಗ್ರಂಥಾಲಯ ಸ್ನೇಹಿ ಪೊಲೀಸ್ ಠಾಣೆಗಳು

ಮಾನ್ಯರೆ,

ಈಗಾಗಲೇ ರಾಜ್ಯದಲ್ಲಿ ಬೆಂಗಳೂರಿನ ಆಗ್ನೇಯ ವಿಭಾಗದ ವ್ಯಾಪ್ತಿಗೆ ಒಳಪಡುವ ಕೋರಮಂಗಲ, ಮೈಕೋ ಲೇಔಟ್, ಎಲೆಕ್ಟ್ರಾನಿಕ್ ಸಿಟಿಯ ಮೂರು ಪೊಲೀಸ್ ಠಾಣೆಗಳಲ್ಲಿ ಗ್ರಂಥಾಲಯಗಳು ಶುರುವಾಗಿರುವುದು ಸಂತಸವಾಗಿದೆ. ಬಾಲ್ಯದಿಂದಲೇ ಓದುವ ಹವ್ಯಾಸವನ್ನು ರೂಢಿಸಿಕೊಂಡು ಓದಿ ಅನೇಕ ಸರ್ಕಾರಿ ಹಾಗೂ ಖಾಸಗಿ ಕೆಲಸಗಳನ್ನು ಪಡೆದುಕೊಳ್ಳುತ್ತಾರೆ. ಅದರಲ್ಲಿ ಪೊಲೀಸ್ ಇಲಾಖೆಯು ಸಹ ಒಂದು. ಇಂತಹ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಒಂದು ಗ್ರಂಥಾಲಯ ಇದ್ದರೆ ಬಹಳಷ್ಟು ಉಪಯೋಗಗಳಾಗುತ್ತದೆ. ಜನರು ಪೊಲೀಸ್ ಠಾಣೆಗಳೆಂದರೆ ಭಯದ ಭೀತಿ ಅನುಭವಿಸುತ್ತಾರೆ. ಇಂತಹ ವಾತಾವರಣದಿಂದ ಪೊಲೀಸ್ ಠಾಣೆಗಳಲ್ಲಿ ಓದುವ ಅಭಿರುಚಿಯಿಂದ ಜನರಲ್ಲಿನ ಭಯದ ಭೀತಿಯನ್ನು ಹೋಗಲಾಡಿಸಲು ಇದು ಉಪಯೋಗವಾಗುತ್ತದೆ ಮತ್ತು ಠಾಣೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಮತ್ತು ಅಲ್ಲಿರುವ ಎಷ್ಟೋ ಮಂದಿ ಖೈದಿಗಳು ಸಹ ಓದುವ ಮತ್ತು ಬರೆಯುವ ಹವ್ಯಾಸ ಹೊಂದಿದ್ದು ಕಾರಣಾಂತರಗಳಿಂದ ಶಿಕ್ಷೆ ಅನುಭವಿಸುವಂತಾಗಿದೆ. ಪೊಲೀಸ್ ಠಾಣೆಯಲ್ಲಿ ಗ್ರಂಥಾಲಯ ತೆರೆದ ಖೈದಿಗಳಿಗೆ ಓದಿ ಹಾಗೂ ಕಾನೂನಿನ ನಿಯಮಗಳು ಹಾಗೂ ಅಪರಾಧಕ್ಕೆ ಶಿಕ್ಷೆಗಳು ತಿಳಿಸುವಂತಹ ಪುಸ್ತಕಗಳನ್ನು ಇಟ್ಟರೆ ಜೀವನದಲ್ಲಿ ಬದಲಾವಣೆಗಳಾಗಬಹುದು. ಮೈಸೂರು ಪೊಲೀಸ್ ಠಾಣೆಗಳಲ್ಲಿ ಗ್ರಂಥಾಲಯ ತೆರೆದಿರುವುದರ ಜೊತೆಗೆ ರಾಜ್ಯದ ಪ್ರತಿಯೊಂದು ಪೊಲೀಸ್ ಠಾಣೆಗಳಲ್ಲಿ ಗ್ರಂಥಾಲಯ ತೆರೆದರೆ ಸೂಕ್ತವಾಗುತ್ತದೆ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಜಿ–20 ಸಂಘಟನೆಗೆ ಭಾರತದ ನೇತೃತ್ವ

2022ರ ಡಿಸೆಂಬರ್ 1ರಂದು ಜಿ–20 ದೇಶಗಳ ಅಧ್ಯಕ್ಷ ಸ್ಥಾನವನ್ನು ಭಾರತವು ಇಂಡೋನೇಷ್ಯಾದಿಂದ ಅಧಿಕೃತವಾಗಿ ವಹಿಸಿಕೊಳ್ಳಲಿದೆ. ಮುಂದಿನ ಒಂದು ವರ್ಷ (2023) ಕಾಲ ಭಾರತ ಈ ಹುದ್ದೆ ನಿರ್ವಹಿಸಲಿದೆ. ನವೆಂಬರ್ 16ರಂದು ಇಂಡೋನೇಷ್ಯಾದ ಬಾಲಿ ದ್ವೀಪದಲ್ಲಿ ನಡೆದ ಸಭೆಯಲ್ಲಿ ಇದುವರೆಗೆ ಅಧ್ಯಕ್ಷ ಸ್ಥಾನ ಹೊಂದಿದ್ದ ಇಂಡೋನೇಷ್ಯಾದ ಅಧ್ಯಕ್ಷರಾದ ಜೊಕೊ ವಿಡೊಡು ರವರು ಭಾರತದ ಪ್ರಧಾನಿಯವರಿಗೆ ಬ್ಯಾಟನ್ ನೀಡುವ ಮೂಲಕ ಮುಂದಿನ ಅವಧಿಗೆ ಸಾಂಕೇತಿಕವಾಗಿ ಅಧಿಕಾರವನ್ನು ಹಸ್ತಾಂತರಿಸಿದರು. ಅಂತರ್ರಾಷ್ಟ್ರೀಯ ವೇದಿಕೆಯಲ್ಲಿ ಭಾರತಕ್ಕೆ ತನ್ನ ಶಕ್ತಿ, ಸಾಮರ್ಥ್ಯ ತೋರಿಸಲು ಸುವರ್ಣಾವಕಾಶ ಒದಗಿಸಿದೆ. ಮುಂದಿನ ದಿನಗಳಲ್ಲಿ ಎಲ್ಲವೂ ಯೋಜನೆಯಂತೆ ಸುಸೂತ್ರವಾಗಿ ನಡೆದಲ್ಲಿ ಅಮೇರಿಕದ ಅಧ್ಯಕ್ಷ ಬಿಡೆನ್, ಚೀನಾದ ಕ್ಸಿ ಜಿನ್‌ಪಿಂಗ್, ರಷ್ಯಾದ ಪುತಿನ್, ಬ್ರಿಟನ್‌ನ ಪ್ರಧಾನಿ ರಿಷಿ ಸುನಾಕ್, ಜರ್ಮನ್ ಛಾನ್ಸಲರ್ ಓಲಾಫ್ ಸ್ಕೋಲ್ಜ್, ಟರ್ಕಿ ಅಧ್ಯಕ್ಷ ಎಡೋರ್ಗಂ, ಅರ್ಜೆಂಟೀನಾ ಅಧ್ಯಕ್ಷ ಆಲ್ಬರ್ಟೋ ಫೆರ್ನಾಂಡೀಸ್ ಹಾಗೂ ಇನ್ನೂ ಅನೇಕ ದೇಶಗಳ ನಾಯಕರು ಜಿ–20ರಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸಲಿದ್ದಾರೆ. 'ಅತಿಥಿ ದೇವೊ ಭವ' ಎಂಬ ಸಂದೇಶ ನೀಡಿರುವ ಭಾರತಕ್ಕೆ ಜಗತ್ತಿನ ಪ್ರಮುಖ ನಾಯಕರಿಗೆ ಆತಿಥ್ಯ ನೀಡುವ ಅವಕಾಶ ಲಭಿಸಲಿದೆ.

ಜಿ–20ರ ರಚನೆ ಮತ್ತು ಕಾರ್ಯಶೈಲಿ:

ತೊಂಭತ್ತರ ದಶಕದ ಅಂತ್ಯದಲ್ಲಿ ಪೂರ್ವ ಹಾಗೂ ಆಗ್ನೇಯ ಏಷ್ಯಾಗಳ ರಾಷ್ಟ್ರಗಳಲ್ಲಿ ಉಂಟಾದ ಆರ್ಥಿಕ ಹಿಂಜರಿತ ಹಾಗೂ ಬಿಕ್ಕಟ್ಟಿನಿಂದ ಆತಂಕಗೊಂಡವು. ಈ ಹಿನ್ನೆಲೆಯಲ್ಲಿ 1999ರಲ್ಲಿ ಮಧ್ಯಮ–ಕೆಳ ಮಧ್ಯಮ ಆದಾಯದ ದೇಶಗಳನ್ನು ಒಳಗೊಂಡ ಜಿ–20 ಅನ್ನು ರಚಿಸಲಾಯಿತು. ಈ ಮೂಲಕ ಜಾಗತಿಕ ಆರ್ಥಿಕ ಸ್ಥಿರತೆಯನ್ನು ಸುರಕ್ಷಿತಗೊಳಿಸುವುದು ಈ ಒಕ್ಕೂಟದ ಮುಖ್ಯ ಗುರಿಯಾಗಿದೆ.

ಜಿ–20 ಒಂದು ಸ್ಪಷ್ಟ ಉದ್ದೇಶ ಅಥವಾ ಕಾರ್ಯಸೂಚಿ (AGENDA) ಹೊಂದಿರುವ ಕಾನೂನು ಪ್ರಕಾರ ರಚಿಸಿದ ಸಂಸ್ಥೆ ಅಥವಾ ಸಂಘಟನೆಯಾಗಿ ಕಾರ್ಯನಿರ್ವಹಿಸುವುದಿಲ್ಲ. ಇದಕ್ಕೆ ಯಾವುದೇ ಶಾಶ್ವತ ಸಚಿವಾಲಯವು ಇರುವುದಿಲ್ಲ. ಕಾಲಕಾಲಕ್ಕೆ ಜಗತ್ತನ್ನು ಕಾಡುವ ಗಂಭೀರ ಸಮಸ್ಯೆಗಳೇ ಜಿ–20ರ ಅಜೆಂಡಾ ಆಗಿರುತ್ತದೆ. ಇವುಗಳನ್ನು ಪರಿಹರಿಸಲು ಜಿ–20 ದೇಶಗಳ ಪ್ರತಿನಿಧಿಗಳು ಗಮನ ನೀಡುತ್ತಾರೆ. ಇಂತಹ ಪ್ರತಿನಿಧಿಗಳನ್ನು ಶೆರ್ಪಾಸ್ ಎಂದು ಕರೆಯಲಾಗುತ್ತದೆ. ಅಧ್ಯಕ್ಷತೆ ವಹಿಸುವ ದೇಶಗಳ ಹಣಕಾಸು ಸಚಿವರು ಮತ್ತು ಕೇಂದ್ರೀಯ ಬ್ಯಾಂಕ್‌ಗಳ ಗವರ್ನರ್‌ಗಳೊಂದಿಗೆ ಸಮಾಲೋಚಿಸಿ ಅಜೆಂಡಾದ ಕುರಿತು ಕೆಲಸ ನಿರ್ವಹಿಸುತ್ತಾರೆ. ಕೇಂದ್ರ ಮಂತ್ರಿ ಪಿಯೂಷ್ ಗೋಯಲ್ ನಂತರ ನೀತಿ ಆಯೋಗದ ಮಾಜಿ ಸಿಇಓ ಅಮಿತಾಬ್ ಕಾಂತ್, ಜಿ–20ರ ಶೆರ್ಪಾಗಳೆಂದು ಭಾರತ ಘೋಷಿಸಿದೆ. ಜಿ–20 ಜಗತ್ತಿನ ಶ್ರೀಮಂತ ಮತ್ತು ಅಭಿವೃದ್ಧಿಶೀಲ ದೇಶಗಳ ಅಂತರ ಸರಕಾರಗಳ ಮಧ್ಯೆ ಸಮನ್ವಯ ತಂದು ಕಾರ್ಯನಿರ್ವಹಿಸುವ ವೇದಿಕೆಯಾಗಿದೆ.

ಜಿ–20ರ ಲಾಂಛನದ ಮಹತ್ವ:

ಜಿ–20 ಸಮಾವೇಶಕ್ಕೆ ಭಾರತವು ರಾಷ್ಟ್ರೀಯ ಪುಷ್ಪ ಕಮಲವನ್ನು ಲಾಂಛನವಾಗಿ ನೀಡಿದೆ. ಕಮಲವು ಭಾರತದ ಪೌರಾಣಿಕ ಪರಂಪರೆ, ಆಧ್ಯಾತ್ಮಿಕತೆ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಪರಿಚಯಿಸುತ್ತದೆ. ಭಾರತೀಯರ ಆಸ್ಥೆ (ನಂಬಿಕೆ)ಯಂತೆ ಸೃಷ್ಟಿಕರ್ತ ಚತುರ್ಮುಖ ಬ್ರಹ್ಮ ಕಮಲದಿಂದ ಆವಿರ್ಭವಿಸಿದ: ಕಮಲವು ಲಕ್ಷ್ಮೀಯ ಪೀಠವಾಗಿದೆ. ಈ ರೀತಿ ಕಮಲವು ಹೊಸ ಆವಿಷ್ಕಾರ, ಸಂಶೋಧನೆ ಹಾಗೂ ಸೃಷ್ಟಿಯ ಜತೆಗೆ ಶ್ರಮ, ಸಾಮರ್ಥ್ಯ, ಸಾಧನೆ ಸಮೃದ್ಧಿ ಹಾಗೂ ಸಂಪತ್ತನ್ನು ಸಂಕೇತಿಸುತ್ತದೆ. ಕೆಸರಿನಲ್ಲಿ ಹುಟ್ಟಿದರೂ ಪರಿಶುದ್ಧವಾಗಿ ಅರಳುವ ಕಮಲವು ಎಂತಹ ಪ್ರತಿಕೂಲ ಪ್ರತಿಕೂಲ ಪರಿಸ್ಥಿತಿಯನ್ನೂ ಎದುರಿಸಿ ವಿಜಯ ಸಾಧಿಸುವ ಭರವಸೆಯ ಪ್ರತೀಕವಾಗಿದೆ. ಏಳು ಎಸಳುಗಳಿರುವ ಕಮಲದ ಮೇಲಿರುವ ಭೂಮಿಯು, ಏಳು ಸಾಗರಗಳು, ಖಂಡಗಳು, ಒಂದಾಗಿವೆ ಎಂಬ ಸಂದೇಶವನ್ನು ನೀಡುತ್ತದೆ. ಒಂದು ಭೂಮಿ (One earth), ಒಂದು ಪರಿವಾರ (On Family), ಒಂದು ಭವಿಷ್ಯ (One Future) ಎಂಬ ಸಂದೇಶ ವಾಕ್ಯವು ಭಾರತದ ವಸುದೈವ ಕುಟುಂಬಕಂ (ಸಂಪೂರ್ಣ ಭೂಮಿಯೇ ಒಂದು ಕುಟುಂಬ) ಎಂಬ ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ. ಜಿ–20ರ ಲಾಂಛನವನ್ನು ಅನಾವರಣಗೊಳಿಸುವ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು. ಜಗತ್ತು ಎಲ್ಲ ರೀತಿಯ ಸಮಸ್ಯೆ ಸಂಕಷ್ಟಗಳಿಂದ ಮುಕ್ತವಾಗಿ ಸುಖ, ಶಾಂತಿ, ನೆಮ್ಮದಿ ಹಾಗೂ ಸಮೃದ್ಧಿಯೊಡನೆ ಒಂದಾಗಿ ಬಾಳಲಿ ಎಂಬುದು ಈ ಲಾಂಛನದ ಆಶಯವಾಗಿದೆ.

ಜಗತ್ತು ಬಿಕ್ಕಟ್ಟು ಮತ್ತು ಗೊಂದಲದಿಂದಿರುವ ಸನ್ನಿವೇಶದಲ್ಲಿ ಭಾರತಕ್ಕೆ ಜಿ–20 ಮುನ್ನಡೆಸುವ ಅವಕಾಶ ದೊರೆತಿದೆ. ಕೊರೊನಾ ನಂತರ ಉಂಟಾಗಿರುವ ಆರ್ಥಿಕ ಹಿಂಜರಿತ, ಘರ್ಷಣೆಗಳು, ಅರಾಜಕ ಪರಿಸ್ಥಿತಿಯೊಂದಿಗೆ ಜಗತ್ತು ಮುಂದುವರಿಯುತ್ತಿದೆ. ಜಿ–20 ಕೇವಲ ಒಂದು ರಾಜತಾಂತ್ರಿಕ ಸಮಾವೇಶವಾಗುವ ಬದಲು ಒಂದು ಜವಾಬ್ದಾರಿಯುತ ಸಂಘಟನೆಯಾಗಿ ರೂಪಿಸುವ ವಿಶ್ವಾಸದೊಂದಿಗೆ ಭಾರತವು ನೇತೃತ್ವವನ್ನು ಸ್ವೀಕರಿಸಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತವನ್ನು ಹೊಸ ಕಲ್ಪನೆಯೊಂದಿಗೆ, ಅರಿಯುವ, ಅರ್ಥಗೊಳ್ಳುವ ಪ್ರಯತ್ನ ಜಗತ್ತಿನಲ್ಲಿ ಆರಂಭವಾಗಿದೆ.

ಜಿ–20ರಲ್ಲಿ ಅಮೇರಿಕ, ಆಸ್ಟ್ರೇಲಿಯಾ, ಚೀನಾ, ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್ ಹಾಗೂ ಇನ್ನೂ ಕೆಲವು ಮಿಲಿಟರಿಯಾಗಿ ಆರ್ಥಿಕವಾಗಿ ಶಕ್ತಿಶಾಲಿಯಾಗಿರುವ ದೇಶಗಳು ಮತ್ತು ಭಾರತ, ಬ್ರೆಝಿಲ್, ಮೆಕ್ಸಿಕೊ, ಟರ್ಕಿ, ಅರ್ಜೇಂಟೀನಾದಂತಹ ಅಭಿವೃದ್ಧಿಶೀಲ ದೇಶಗಳ ಸಂಘಟನೆಯಾಗಿದೆ. ಜಗತ್ತಿನ ಮೂರನೇ ಎರಡರಷ್ಟು ಜನಸಂಖ್ಯೆ, ಜಾಗತಿಕ ಜಿಡಿಪಿಯಲ್ಲಿ ಶೇ. 85 ಪಾಲು, ಅಂತರಾಷ್ಟ್ರೀಯ ವಾಣಿಜ್ಯ ವ್ಯಾಪಾರದಲ್ಲಿ ಶೇ. 75ರಷ್ಟು ಪಾಲು ಹೊಂದಿರುವ ಜಿ–20 ಗುಂಪು ವಿಶ್ವದ ಬಲಾಢ್ಯ ಸಂಘಟನೆಯಾಗಿದೆ.

2023ರಲ್ಲಿ ಭಾರತವು ಜಿ–20ರ ಅಧ್ಯಕ್ಷ ಸ್ಥಾನದಲ್ಲಿದ್ದು, ಕಾರ್ಯಕ್ರಮಗಳನ್ನು ರೂಪಿಸುವ ನಿರ್ಣಯಿಸುವ ತ್ರಿಸದಸ್ಯ ಸಮಿತಿಯಲ್ಲಿ (TROIKA) ಇಂಡೋನೇಷ್ಯಾ, ಬ್ರೆಝಿಲ್ ಸೇರಿದೆ. ಪ್ರಥಮ ಬಾರಿ ಟ್ರೋಕಾದಲ್ಲಿ ಅಭಿವೃದ್ಧಿಶೀಲ ದೇಶಗಳು ಸದಸ್ಯರಾಗಿವೆ. ಈ ಮೂರು ದೇಶಗಳು ಸೇರಿ ಅಭಿವೃದ್ಧಿಶೀಲ ದೇಶಗಳ ಅಪೇಕ್ಷೆಗಳನ್ನು, ಬೇಡಿಕೆಗಳನ್ನು ಜಾಗತಿಕ ಮಟ್ಟದಲ್ಲಿ ಮಂಡಿಸಲಿವೆ. ಜಿ–20ರ ಅಧ್ಯಕ್ಷತೆ ವಹಿಸುವ ದೇಶವು ಕೆಲವು ದೇಶಗಳು ಹಾಗೂ ಅಂತರಾಷ್ಟ್ರೀಯ ಸಂಘಟನೆಗಳಿಗೆ ವಿಶೇಷ ಆಹ್ವಾನವನ್ನು ನೀಡುವ ಅವಕಾಶವಿದೆ. ವಿಶ್ವಸಂಸ್ಥೆ, ಐ.ಎಂ.ಎಫ್. ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆ ಹಾಗೂ ಕೇಂದ್ರ ಸಂಸ್ಥೆಗಳು ಖಾಯಂ ಆಹ್ವಾನಿತವಾಗಿವೆ. ಇವುಗಳೊಂದಿಗೆ ಭಾರತವು ಜಿ–20ರ ಅಧ್ಯಕ್ಷತೆಯ ನೆಲೆಯಲ್ಲಿ ಬಾಂಗ್ಲಾದೇಶ, ಈಜಿಪ್ತ್, ಮಾರಿಷಸ್, ನೆದರ್ಲೆಂಡ್, ನೈಜೀರಿಯಾ, ಓಮನ್, ಸಿಂಗಾಪುರ ಹಾಗೂ ಯುಎಇ ದೇಶಗಳನ್ನು ಭಾರತವು ಅತಿಥಿಗಳಾಗಿ ಆಹ್ವಾನಿಸಿದೆ. ಸ್ಪೈನ್ ದೇಶವನ್ನು ಖಾಯಂ ಅತಿಥಿಯೆಂದು ಪರಿಗಣಿಸಲಾಗಿದೆ.

ಮುಂದಿನ ಒಂದು ವರ್ಷದಲ್ಲಿ ಭಾರತವು ಜಿ–20ರ ಸುಮಾರು 200 ಸಭೆಗಳನ್ನು ಆಯೋಜಿಸಲಿದ್ದು ಸೆಪ್ಟೆಂಬರ್ 9, 10ರಂದು ಕೊನೆಯ ಮಹಾಶೃಂಗಸಭೆಯನ್ನು ಏರ್ಪಡಿಸಲಿದೆ. ಈ ಸಭೆಗಳು ಭಾರತದ ರಾಜಧಾನಿ ದಿಲ್ಲಿ ಸಹಿತ ದೇಶದ ಅನೇಕ ನಗರಗಳಲ್ಲಿ ನಡೆಯಲಿದೆ. ಪ್ರಧಾನಿ ಮೋದಿಯವರು "ಸ್ವಾತಂತ್ರ್ಯದ ಅಮೃತೋತ್ಸವ ವರ್ಷದಲ್ಲಿ ಜಿ–20ರ ನೇತೃತ್ವವು ಭಾರತಕ್ಕೆ ದೊರೆತಿರುವುದು ಹೆಮ್ಮೆಯ ಸಂಗತಿಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಜಿ–20ರ ಹೆಚ್ಚುತ್ತಿರುವ ಚಟುವಟಿಕೆ ಹಾಗೂ ಕ್ರಿಯಾಶೀಲತೆ ಜಗತ್ತಿಗೆ ಸಂತಸ ತರುವ ಸಂಗತಿಯಾಗಿದೆ ಎಂದು ತಿಳಿಸಿದರು. ಜಿ–20 ಶೃಂಗವು ಕೇವಲ ಭಾರತ ಸರಕಾರದ ಕಾರ್ಯಕ್ರಮವಲ್ಲ. ಈ ಶೃಂಗದಲ್ಲಿ ಎಲ್ಲ ರಾಜ್ಯ ಸರಕಾರಗಳು, ರಾಜಕೀಯ ಪಕ್ಷಗಳು ಭಾಗವಹಿಸಬೇಕೆಂದು ಆಹ್ವಾನ ನೀಡಿದರು. ಈ ಶೃಂಗವು ದೇಶದ ಸನಾತನ ಪರಂಪರೆಯಲ್ಲಿ ಬಂದಿರುವ "ಅತಿಥಿ ದೇವೊ ಭವ"ದ ಪರಿಚಯವನ್ನು ಜಾಗತಿಕ ನಾಯಕರಿಗೆ ತೋರಿಸುವ ಅವಕಾಶ ನೀಡಲಿದೆ ಎಂದೂ ಪ್ರಧಾನಿಯವರು ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಶೃಂಗಸಭೆಯ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಿ ಭಾರತದ ಶಕ್ತಿ, ಸಾಮರ್ಥ್ಯ ಜಗತ್ತಿಗೆ ಪರಿಚಯವಾಗಲೆಂದು ನಾವೆಲ್ಲರೂ ಹಾರೈಸೋಣ.



> "ಜಗತ್ತು ಬಿಕ್ಕಟ್ಟು ಮತ್ತು ಗೊಂದಲದಿಂದಿರುವ ಸನ್ನಿವೇಶದಲ್ಲಿ ಭಾರತಕ್ಕೆ ಜಿ–20 ಮುನ್ನಡೆಸುವ ಅವಕಾಶ ದೊರೆತಿದೆ. ಕೊರೊನಾ ನಂತರ ಉಂಟಾಗಿರುವ ಆರ್ಥಿಕ ಹಿಂಜರಿತ, ಘರ್ಷಣೆಗಳು, ಅರಾಜಕ ಪರಿಸ್ಥಿತಿಯೊಂದಿಗೆ ಜಗತ್ತು ಮುಂದುವರಿಯುತ್ತಿದೆ. ಜಿ–20 ಕೇವಲ ಒಂದು ರಾಜತಾಂತ್ರಿಕ ಸಮಾವೇಶವಾಗುವ ಬದಲು ಒಂದು ಜವಾಬ್ದಾರಿಯುತ ಸಂಘಟನೆಯಾಗಿ ರೂಪಿಸುವ ವಿಶ್ವಾಸದೊಂದಿಗೆ ಭಾರತವು ನೇತೃತ್ವವನ್ನು ಸ್ವೀಕರಿಸಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತವನ್ನು ಹೊಸ ಕಲ್ಪನೆಯೊಂದಿಗೆ, ಅರಿಯುವ, ಅರ್ಥಗೊಳ್ಳುವ ಪ್ರಯತ್ನ ಜಗತ್ತಿನಲ್ಲಿ ಆರಂಭವಾಗಿದೆ.

ನ.28, ನಂ.ಗೂಡು ತಾಲೂಕಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ

ಮೈಸೂರು, ನ.25– ಜಿಲ್ಲಾಡಳಿತ, ಮೈಸೂರು ಧಾರ್ಮಿಕ ದತ್ತಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ನೀರಾವರಿ ನಿಗಮ ನಿಯಮಿತ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇಂಧನ ಇಲಾಖೆ ಹಾಗೂ ಪೌರಾಡಳಿತ ಇಲಾಖೆ ವತಿಯಿಂದ ನವೆಂಬರ್ 28 ರಂದು ಬೆಳಗ್ಗೆ 10.30 ಗಂಟೆಗೆ ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಕಾಮಗಾರಿಗಳ ಗುದ್ದಲಿಪೂಜೆ ಹಾಗೂ ನುಗು ಮತ್ತು ಹೆಡಿಯಾಲ ಏತ ಯೋಜನೆಗೆ ಚಾಲನಾ ಸಮಾರಂಭ, ಗೋಳೂರು (ಗೀಕಹಳ್ಳಿ) ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ 66/11 ಕೆ.ವಿ. ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನೆ, ನಗರೋತ್ಥಾನ ಹಂತ–4ರಲ್ಲಿ ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ನಗರೋತ್ಥಾನ ಹಂತ– 3ರಲ್ಲಿ ಗೌರಿಘಟ್ಟದ ಬೀದಿಯಲ್ಲಿರುವ ನಾಯಕ ಸಮುದಾಯ ಭವನದ ಉದ್ಘಾಟನೆ, ಮಹರ್ಷಿ ವಾಲ್ಮೀಕಿ ಸಮುದಾಯ ಭವನದ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು. ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ, ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಶ್ರೀರಾಮುಲು, ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ (ಭೈರತಿ), ಮುಜರಾಯಿ ಹಜ್ ಹಾಗೂ ವಕ್ಫ್ ಸಚಿವ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್, ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, ಇಂಧನ ಹಾಗೂ ಕನ್ನಡ ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಉಪಸ್ಥಿತರಿರುವರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಆಗಮಿಸುವರು.

ನಂಜನಗೂಡು ಕ್ಷೇತ್ರದ ವಿಧಾನಸಭಾ ಶಾಸಕ ಬಿ.ಹರ್ಷವರ್ಧನ್ ಅಧ್ಯಕ್ಷತೆಯನ್ನು ವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮೈಸೂರು ಕ್ಷೇತ್ರದ ಲೋಕಸಭಾ ಸದಸ್ಯ ಪ್ರತಾಪ್‌ಸಿಂಹ, ಚಾಮರಾಜನಗರ ಕ್ಷೇತ್ರದ ಲೋಕಸಭಾ ಸದಸ್ಯರಾದ ವಿ.ಶ್ರೀನಿವಾಸ್ ಪ್ರಸಾದ್, ಮಂಡ್ಯ ಕ್ಷೇತ್ರ ಲೋಕಸಭಾ ಸದಸ್ಯರಾದ ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಶಾಸಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಮೈಸೂರು ವಿಜಯನಗರ ಉದ್ಯಾನವನ ಮರ ಕಡಿದ ಪ್ರಕರಣ ಸಂಬಂಧ

ವಿಚಾರಣೆ ನಡೆಸದ ಮುಡಾ ಅಧಿಕಾರಿಗಳ ಕ್ರಮ ಪ್ರಶ್ನಿಸಿ ಮೇಲ್ಮನವಿ

ಮೈಸೂರು, ನ.25(ಆರ್‌ಕೆಬಿ)– ವಿಜಯನಗರ 3ನೇ ಹಂತದ ಇ ಬ್ಲಾಕ್‌ನಲ್ಲಿರುವ ಉದ್ಯಾನವನ ಸಂಖ್ಯೆ 11 ಅನ್ನು ನಿರ್ವಹಣೆಗಾಗಿ ಮರಿಯಪ್ಪ ಎಂಬುವರಿಗೆ ಹಸ್ತಾಂತರಿಸಿದ ಅನುಮತಿ ಪತ್ರ ಕೋರಿ ನಿವೃತ್ತ ಕಾರ್ಯಪಾಲಕ ಅಭಿಯಂತರ ವೈ.ಸಿ.ಕಾಳೇಗೌಡ, ಮತ್ತೊಮ್ಮೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ.

ಈಗಾಗಲೇ ಹಲವು ಪತ್ರಗಳನ್ನು ಮುಡಾ ಅಧಿಕಾರಿಗಳಿಗೆ ಬರೆದಿದ್ದರೂ ಸೂಕ್ತ ತನಿಖೆಯಾಗಲೀ, ಕ್ರಮವಾಗಲೀ ಕೈಗೊಳ್ಳುತ್ತಿಲ್ಲ ಎಂದು ಈಗಾಗಲೇ ಮುಡಾ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಪತ್ರ ಬರೆದಿದ್ದರೂ ಸೂಕ್ತ ಉತ್ತರ ದೊರೆತಿಲ್ಲ ಎಂದು ಅವರು ದೂರಿದ್ದಾರೆ.

ಮುಡಾ ಅಧಿಕಾರಿಗಳು ನೀಡಿದ್ದ ನೋಟಿಸ್‌ಗೆ ಸಂಬಂಧಿಸಿದಂತೆ ತಾವು ಅ.10ರಂದು ಕಚೇರಿಗೆ ಹಾಜರಾಗಿದ್ದರೂ ಯಾವುದೇ ವಿಚಾರಣೆ ನಡೆಸದೆ ಪ್ರಕರಣವನ್ನು ಮುಕ್ತಾಯಗೊಳಿಸಿರುವುದಾಗಿ ತಿಳಿಸಿದ್ದಾರೆ ಎಂದು ಕಾಳೇಗೌಡ ದೂರಿದ್ದಾರೆ. ವಿಜಯನಗರ 3ನೇ ಹಂತದ ಉದ್ಯಾನವನದಲ್ಲಿ ಗಿಡ ಮರಗಳಿಗೆ ಕೊಡಲಿ ಹಾಕಿದವರ ಮೇಲೆ ಕ್ರಮ ಕೈಗೊಳ್ಳದ ಮುಡಾ ಅಧಿಕಾರಿಗಳ ವಿರುದ್ಧ ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿದ್ದರು.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ: ಎನ್‌ಐಎ ತನಿಖೆಗೆ ಕೇಂದ್ರದಿಂದ ಅಧಿಕೃತ ಆದೇಶ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ತನಿಖೆಯನ್ನು ಎನ್‌ಐಎಗೆ ವಹಿಸಿ ಕೇಂದ್ರ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.

ಮಂಗಳೂರಿನ ಆಟೋದಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ದಂತೆ ರಾಜ್ಯದ ಪೊಲೀಸರು ಪ್ರಾಥಮಿಕ ತನಿಖೆ ಮಾಡಿದ್ದಾರೆ. ಈ ತನಿಖೆಯಲ್ಲಿ ಸಂಗ್ರಹಿಸಲಾದ ಸಾಕ್ಷ್ಯಗಳನ್ನು ಆಧರಿಸಿ ರಾಜ್ಯ ಸರ್ಕಾರ ಯುಎಪಿಎ ಕಾಯ್ದೆ ಅನ್ವಯ ಎನ್‌ಐಎ ತನಿಖೆ ನಡೆಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿತ್ತು. ಪ್ರಕರಣದ ಆರೋಪಿ ಶಂಕಿತ ಉಗ್ರ ಶಾರೀಕ್ ಬಗ್ಗೆ ಆಘಾತಕಾರಿ ಅಂಶಗಳು ಬೆಳಕಿಗೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಇದೀಗ ಈ ಪ್ರಕರಣವನ್ನು ರಾಜ್ಯ ಸರ್ಕಾರ, ಎನ್‌ಐಎ ತನಿಖೆಗೆ ವರ್ಗಾವಣೆಗೊಳಿಸಿ ಆದೇಶ ಹೊರಡಿಸಿತ್ತು. ಶಂಕಿತ ಉಗ್ರ ಶಾರೀಕ್ ವಿರುದ್ಧ ಯುಎಪಿಎ ಕಾಯ್ದೆ ಅನ್ವಯ ಎನ್‌ಐಎ ತನಿಖೆ ನಡೆಸಲು ರಾಜ್ಯ ಸರ್ಕಾರ ಶಿಫಾರಸು ಮಾಡಿತ್ತು.

ಬಿಎಲ್ ಸಂತೋಷ್‌ಗೆ ಎಸ್‌ಐಟಿ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆ

ಹೈದರಾಬಾದ್: ನಾಲ್ವರು ಟಿಆರ್‌ಎಸ್ ಶಾಸಕರ ಖರೀದಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿಎಲ್ ಸಂತೋಷ್ ಅವರಿಗೆ ನೀಡಿದ್ದ ಎರಡನೇ ನೋಟಿಸ್‌ಗೆ ತೆಲಂಗಾಣ ಹೈಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ. ತೆಲಂಗಾಣ ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಎಸ್‌ಐಟಿ ಗುರುವಾರ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ(ಸಂಘಟನೆ) ಸಂತೋಷ್ ಅವರಿಗೆ ಎರಡನೇ ನೋಟಿಸ್ ಜಾರಿ ಮಾಡಿತ್ತು. ಆದರೆ ಇದನ್ನು ಪ್ರಶ್ನಿಸಿ ಸಂತೋಷ್ ಪರ ವಕೀಲರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ಸುರೇಂದರ್ ಅವರು ನೋಟಿಸ್‌ಗೆ ಡಿಸೆಂಬರ್ 5 ರವರೆಗೆ ತಡೆ ನೀಡಿದ್ದಾರೆ.



ಮುರುಘಾ ಶ್ರೀ ನ್ಯಾಯಾಂಗ ಬಂಧನ ವಿಸ್ತರಣೆ

ಚಿತ್ರದುರ್ಗ: ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಡಾ. ಶಿವಮೂರ್ತಿ ಮುರುಘಾ ಶರಣರು, ವಾರ್ಡನ್ ರಶ್ಮಿ ಮತ್ತು ಮ್ಯಾನೇಜರ್ ಪರಮಶಿವಯ್ಯ ಅವರ ನ್ಯಾಯಾಂಗ ಬಂಧನವನ್ನು ಡಿಸೆಂಬರ್ 3ರವರೆಗೆ ವಿಸ್ತರಿಸಿ ಚಿತ್ರದುರ್ಗದ 2ನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ ಆದೇಶ ಹೊರಡಿಸಿದೆ.



ಮುಂಬೈನಲ್ಲಿ ಕರ್ನಾಟಕ ಬಸ್ಸುಗಳಿಗೆ ಮರಾಠಿಯಲ್ಲಿ ಬರೆದು ಆಕ್ರೋಶ

ಮುಂಬೈ: ಮಹಾರಾಷ್ಟ್ರ ಮತ್ತು ಕರ್ನಾಟಕ ಮಧ್ಯೆ ಗಡಿ ವಿವಾದ ಮುಂದುವರಿಯುತ್ತಿದ್ದಂತೆಯೇ ನಿನ್ನೆ ಗಡಿ ವಿವಾದ ಕುರಿತು ಸಿಎಂ ಬೊಮ್ಮಾಯಿ ನೀಡಿರುವ ಹೇಳಿಕೆ ಖಂಡಿಸಿ ಮುಂಬೈನಲ್ಲಿ ಮರಾಠ ಮಹಾಸಂಘ ಪ್ರತಿಭಟನೆ ನಡೆಸಿದ್ದು ಕರ್ನಾಟಕ ಬಸ್ಸಿಗೆ ಬಣ್ಣ ಬಳಿದು, ಮರಾಠಿಯಲ್ಲಿ ಬರೆದು ತಮ್ಮ ಆಕ್ರೋಶ ಹೊರಹಾಕಿದ್ದಾರೆ. ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಗಡಿ ವಿವಾದ ಕುರಿತು ನೀಡುತ್ತಿರುವ ಹೇಳಿಕೆ ಪ್ರಚೋದನಕಾರಿ ಯಾಗಿದ್ದು, ಜನರನ್ನು ಕೆರಳಿಸುವಂತಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದ್ದರು. ದೇವೇಂದ್ರ ಫಡ್ನವೀಸ್ ಹೇಳಿಕೆ ಪ್ರಚೋದನಕಾರಿಯಾಗಿದೆ. ಗಡಿ ವಿವಾದದಲ್ಲಿ ನಮ್ಮ ಸರ್ಕಾರ ನೆಲ, ಜಲ, ಗಡಿಭಾಗದ ರಕ್ಷಣೆಗೆ ಬದ್ಧವಾಗಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದ್ದರು.



ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಹೇಳಿಕೆ: ಪ.ಮಲ್ಲೇಶ್ ವಿರುದ್ಧ ಪ್ರಕರಣ ದಾಖಲು

ಮೈಸೂರು, ನ.25–ಬ್ರಾಹ್ಮಣರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಚಿಂತಕ ಪ.ಮಲ್ಲೇಶ್ ವಿರುದ್ಧ ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅವರು ಕುವೆಂಪುನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನ.15ರಂದು ನಡೆದ 'ಸಿದ್ದರಾಮಯ್ಯ–75' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಪ.ಮಲ್ಲೇಶ್, 'ಬ್ರಾಹ್ಮಣರು ಮತ್ತು ಬ್ರಾಹ್ಮಣಿಕೆಯನ್ನು ನಂಬಬೇಡಿ ಎಂದು ಹೇಳುವುದರ ಜೊತೆಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ. ಹಾಗೂ ಸಂವಿಧಾನಾತ್ಮಕವಾಗಿ ಶೇ.10ರಷ್ಟು ಮೀಸಲಾತಿಯನ್ನು ದುರ್ಬಲ ವರ್ಗದವರಿಗೆ ನೀಡಿರುವ ಬಗ್ಗೆ ಮಾತನಾಡಿ, ಇದು ಬ್ರಾಹ್ಮಣರ ಕೈವಾಡ' ಎಂದು ಅವಹೇಳನಕಾರಿಯಾಗಿ ಭಾಷಣ ಮಾಡಿದ್ದಾರೆ ಎಂದು ಡಿ.ಟಿ.ಪ್ರಕಾಶ್ ನ.17ರಂದು ನೀಡಿದ್ದ ದೂರನ್ನು ಕುವೆಂಪುನಗರ ಠಾಣೆ ಪೊಲೀಸರು ನ.23ರಂದು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಇಂಜಿನಿಯರ್‌ಗೆ 1.83 ಲಕ್ಷ ವಂಚನೆ

ಮೈಸೂರು, ನ.25–ಪಾನ್ ಕಾರ್ಡ್ ಅಪ್‌ಡೇಟ್ ಮಾಡುವಂತೆ ವಾಟ್ಸಾಪ್‌ಗೆ ಲಿಂಕ್ ರವಾನಿಸಿ ಎಂಜಿನಿಯರ್‌ವೊಬ್ಬರಿಗೆ 1.83 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಬನ್ನಿಮಂಟಪ ವಾಸಿಯಾಗಿರುವ ಇಂಜಿನಿಯರ್ ಅಭಿಲಾಷ್ ಅಶ್ವತ್ಥ್ (30) ಎಂಬುವರ ಮೊಬೈಲ್‌ಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಲಿಂಕ್ ರವಾನೆಯಾಗಿದೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ ಓಟಿಪಿ ನಮೂದಿಸುತ್ತಿದ್ದಂತೆಯೇ ಅವರ ಖಾತೆಯಿಂದ 1,83,996 ರೂ. ಕಡಿತಗೊಂಡಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಧ್ಯಪ್ರದೇಶ ಮಾಜಿ ಸಿಎಂ ಕಮಲ್‌ನಾಥ್ ಆಪ್ತ ಬಿಜೆಪಿ ಸೇರ್ಪಡೆ



ಭೋಪಾಲ್: ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಆಪ್ತ, ರಾಜ್ಯ ಮಾಧ್ಯಮ ಘಟಕದ ಉಪಾಧ್ಯಕ್ಷ ನರೇಂದ್ರ ಸಲೂಜಾ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಬಿಜೆಪಿ ಸೇರ್ಪಡೆ ನಂತರ ಮಾತನಾಡಿದ ಸಲೂಜಾ, 1984ರಲ್ಲಿ ನಡೆದ ಸಿಖ್ ದಂಗೆಯಲ್ಲಿ ಕಮಲನಾಥ್ ಹೆಸರು ಪ್ರಮುಖವಾಗಿ ಕೇಳಿ ಬರುತ್ತಿರುವ ಕಾರಣ ಕಾಂಗ್ರೆಸ್ ತೊರೆದು ಬಿಜೆಪಿ ಸೇರುವುದಾಗಿ ಸ್ಪಷ್ಟಪಡಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 26 ಶನಿವಾರ 2022

ಸಂಪುಟ: 43 | ಸಂಚಿಕೆ: 219 | ಪುಟಗಳು: 12

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಷಷ್ಠಿ ಜಾತ್ರಾ ಮಹೋತ್ಸವ ರದ್ದು



ಮೈಸೂರು, ನ.25– ತಾಲೂಕಿನ ಸಿದ್ದಲಿಂಗಪುರ (ಮೈಸೂರು–ಬೆಂಗಳೂರು ರಸ್ತೆ ಮಾರ್ಗದಲ್ಲಿರುವ)ಗ್ರಾಮದ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನದ ಪುನರ್ ನಿರ್ಮಾಣ ಕಾಮಗಾರಿ ಹಿನ್ನೆಲೆ ನ.29 ರಂದು ಷಷ್ಠಿ ಜಾತ್ರಾ ಮಹೋತ್ಸವ ಆಚರಣೆಯನ್ನು ರದ್ದುಪಡಿಸಲಾಗಿದ್ದು, ದೇವಾಲಯದ ಒಳ ಆವರಣದಲ್ಲಿ ಮಾತ್ರ ಪೂಜಾ ಕೈಂಕರ್ಯಗಳು ನಡೆಯ ಲಿದೆ ಎಂದು ತಹಶೀಲ್ದಾರ್ ಬಿ.ಎನ್.ಗಿರೀಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಒಬ್ಬರಿಗೆ ಒಂದೇ ಟಿಕೆಟ್

● ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ● ಸಿದ್ದರಾಮಯ್ಯ ಸೇರಿ ಇತರೆ ಮುಖಂಡರು ಎರಡು ಕ್ಷೇತ್ರದಲ್ಲಿ ಸ್ಪರ್ಧಿಸುವ ಚಿಂತನೆಯಲ್ಲಿದ್ದರು; 13 ಮಂದಿ ಅರ್ಜಿ ಸಹ ಸಲ್ಲಿಸಿದ್ದರು

ಬೆಂಗಳೂರು, ನ.25(ಕೆಎಂಶಿ)–ಮುಂಬರುವ ವಿಧಾನಸಭೆ ಚುನಾವಣೆಯಲ್ಲಿಒಬ್ಬರಿಗೆ ಒಂದೇ ಟಿಕೆಟ್ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯ ಸೇರಿದಂತೆ ಕೆಲವು ಪ್ರಭಾವಿಗಳು ಎರಡೂ ಕ್ಷೇತ್ರಗಳಲ್ಲಿ ಕಣಕ್ಕಿಳಿಯುವ ಚಿಂತನೆ ನಡೆಸಿದ್ದರು. ನಾಯಕರ ಈ ಚಿಂತನೆಗೆ ಶಿವಕುಮಾರ್ ತಣ್ಣೀರು ಎರಚಿದ್ದಾರೆ. ಯಾರು ಎಷ್ಟೇ ದೊಡ್ಡವರಾದರು. ಒಂದು ಕಡೆ ನಿಂತು ತಮ್ಮ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಬೇಕಿದೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲು 13 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ಪಕ್ಷದ ಎಲ್ಲಾ ನಾಯಕರಿಗೆ ತಾವು ನೀಡಬೇಕಾದ ಸಂದೇಶವನ್ನು ಸಾಮೂಹಿಕವಾಗಿ ನೀಡಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರೂ ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿ ಹಾಗೂ ಬಾದಾಮಿ ಕ್ಷೇತ್ರಗಳಿಂದ ಕಣಕ್ಕಿಳಿದಿದ್ದರು. ಇದರಲ್ಲಿ ಒಂದು ಕ್ಷೇತ್ರದಲ್ಲಿ ಪರಾಭವಗೊಂಡರೂ ಮತ್ತೊಂದರಲ್ಲಿ ಕಡಿಮೆ ಅಂತರದ ಗೆಲುವು ಸಾಧಿಸಿ ವಿಧಾನಸಭೆ ಪ್ರವೇಶಿಸಿದ್ದರು.




ಅವರಿಗೆ ಈ ಬಾರಿಯೂ ಕ್ಷೇತ್ರದ ಸಮಸ್ಯೆ ಎದುರಾ ಗಿದೆ. ಆಗಾಗಿ ನಾನು ಇಂಥ ಕ್ಷೇತ್ರ ದಲ್ಲೇ ಸ್ಪರ್ಧಿಸುತ್ತೇನೆ ಎಂದು ಅರ್ಜಿ ಸಲ್ಲಿಸಿಲ್ಲ. ಅವರ ಮನಸ್ಸಿನಲ್ಲಿ ಐದು ಕ್ಷೇತ್ರಗಳಿವೆ. ಕೆಲವಷ್ಟು ಮಂದಿಯನ್ನು ವಿಧಾನಸಭೆಗೆ ಆಯ್ಕೆ ಮಾಡುವ ಸಾಮರ್ಥ್ಯ ಹೊಂದಿರುವ ಸಿದ್ದರಾಮಯ್ಯ ಅವರಿಗೆ ಅವರ ಆಯ್ಕೆಯೇ ಗೊಂದಲದಿಂದ ಕೂಡಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಶಿವಕುಮಾರ್ ಒಬ್ಬರಿಗೆ ಒಂದೇ ಕ್ಷೇತ್ರ ಎಂಬ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ. ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಯಾರೇ ಆಗಲಿ ಒಬ್ಬರಿಗೆ ಒಂದೇ ಟಿಕೆಟ್. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಇಲ್ಲಿ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ. ಪಕ್ಷ ಮೊದಲು ಅಧಿಕಾರಕ್ಕೆ ಬರಬೇಕು. ಅಧಿಕಾರಕ್ಕೆ ಬಂದಾಗ ಎಲ್ಲರಿಗೂ ಅಧಿಕಾರ ಸಿಗುತ್ತದೆ. ಎಲ್ಲರಿಗೂ ಅವರದೇ ಆದ ಶಕ್ತಿ ಇರುತ್ತದೆ. ಯಾರ ಶಕ್ತಿ ಎಷ್ಟಿದೆ ಎಂದು ಹೇಳಲು ಸಾಧ್ಯವಿಲ್ಲ. ಒಬ್ಬರಿಗೆ 100 ಬೂತ್ ನಿಭಾಯಿಸುವ ಶಕ್ತಿ ಇದ್ದರೆ, ಮತ್ತೆ ಕೆಲವರಿಗೆ 50, ಇನ್ನೂ ಕೆಲವರಿಗೆ 10 ಬೂತ್ ನಿಭಾಯಿಸುವ ಶಕ್ತಿ ಇರುತ್ತದೆ ಎಂದು ಹೇಳಿದರು

ಅರ್ಜಿ ಸಲ್ಲಿಸುವಾಗ ಆಕಾಂಕ್ಷಿಗಳಿಂದ ದೇಣಿಗೆ ಸಂಗ್ರಹಿಸುವ ವಿಚಾರಕ್ಕೆ ಇದು ನಮ್ಮ ಪಕ್ಷದಲ್ಲಿ ಹೊಸತಲ್ಲ. ಈ ಹಿಂದೆಯೂ ಪಕ್ಷಕ್ಕೆ ದೇಣಿಗೆ ನೀಡಿದ್ದಾರೆ. ಆಗ ಹೆಚ್ಚು ಸುದ್ದಿ ಆಗಿರಲಿಲ್ಲ. ಚುನಾವಣಾ ತಯಾರಿ, ಜಿಲ್ಲೆ ಹಾಗೂ ಬ್ಲಾಕ್ ಮಟ್ಟದಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣ ಸೇರಿದಂತೆ ಹಲವು ವಿಚಾರವಾಗಿ ಆರ್ಥಿಕ ಶಕ್ತಿ ಅಗತ್ಯವಿದೆ. ಕಚೇರಿ ನಿರ್ಮಾಣಕ್ಕೆ ಕಾರ್ಯಕರ್ತರು ಆರ್ಥಿಕ ನೆರವು ಕೇಳಿದಾಗ ನಾವು ಹಣ ಸಹಾಯ ಮಾಡುತ್ತೇವೆ. ಕಾರ್ಯಕರ್ತರಿಗೆ ತೊಂದರೆ ಆದಾಗ ಅವರಿಗೆ ಸಹಾಯ ಮಾಡಲು ಹಣದ ಅಗತ್ಯವಿದೆ. ಹೀಗಾಗಿ ದೇಣಿಗೆಯನ್ನು ಸಂಗ್ರಹಿಸಲಾಗಿದೆ ಎಂದು ಸಮರ್ಥಿಸಿಕೊಂಡರು.

ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಚಿಂತನೆ

ಶಿವಮೊಗ್ಗ: ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಯಾವ ರೀತಿ ಹಾಗೂ ಹೇಗೆ ಜಾರಿ ಮಾಡಬೇಕು ಎಂಬುದರ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಹೊರವಲಯದ ಕಿಮ್ಮನೆ ಗಾಲ್ಫ್ ರೆಸಾರ್ಟ್‌ನಲ್ಲಿ ಶುಕ್ರವಾರ ಆರಂಭವಾದ ಬಿಜೆಪಿ ರಾಜ್ಯ ಪದಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸಮಿತಿ ಸದಸ್ಯರಿಗೆ ಮೂರು ದಿನಗಳ ಪ್ರಶಿಕ್ಷಣ ವರ್ಗ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು.



ಸಂವಿಧಾನದ ಮೂಲ ಪ್ರಸ್ತಾವನೆಯಲ್ಲಿ ಅಡಕವಾಗಿರುವ ಸಮಾನತೆ ಆಶಯ ಕಾರ್ಯರೂಪಕ್ಕೆ ತರಲು ದೀನದಯಾಳ ಉಪಾಧ್ಯ ಅವರ ಕಾಲದಿಂದಲೂ ನಾವು (ಬಿಜೆಪಿ) ಏಕರೂಪ ನಾಗರಿಕ ಸಂಹಿತೆ ಜಾರಿಯ ಅಗತ್ಯದ ಬಗ್ಗೆ ಹೇಳುತ್ತಾ ಬಂದಿದ್ದೇವೆ. ಅದರ ಬಗ್ಗೆ ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಈಗ ಚರ್ಚೆಗಳು ನಡೆಯುತ್ತಿವೆ. ಅದನ್ನು ರಾಜ್ಯದಲ್ಲಿ ಸಕಾಲಕ್ಕೆ ಜಾರಿ ಮಾಡಬೇಕು ಎಂಬ ಉದ್ದೇಶವಿದೆ. ಜನ ಕಲ್ಯಾಣಕ್ಕಾಗಿ ಸಮಾನತೆ ತರುವುದನ್ನು ಪ್ರತಿಪಾದಿಸುವುದು ಮಾತ್ರವಲ್ಲ ಅದನ್ನು ಆಚರಣೆಗೆ ತರಲು ನಾವು ದಿಟ್ಟ ಕ್ರಮ ಕೈಗೊಳ್ಳಲಿದ್ದೇವೆ ಎಂದು ಹೇಳಿದರು.

ಪಕ್ಷದ ಗಟ್ಟಿ ನಿಲುವು ಹಾಗೂ ಸಿದ್ಧಾಂತ ಜನರ ಸಮಸ್ಯೆಗಳಿಗೆ ಪರಿಹಾರ ಕೊಡಲಿದೆ. ಆ ನಿಟ್ಟಿನಲ್ಲಿ ರಾಜ್ಯದಲ್ಲಿರುವ ಎಲ್ಲ ಶ್ರದ್ಧಾ ಕೇಂದ್ರಗಳು ಹಾಗೂ ಮಂದಿರಗಳನ್ನು ಅವುಗಳ ಭಕ್ತರೇ ಮೇಲ್ವಿಚಾರಣೆ ಮಾಡಬೇಕು ಎಂಬುದು ನಮ್ಮ ಪ್ರಬಲ ನಂಬಿಕೆ. ಬರುವ ದಿನಗಳಲ್ಲಿ ಆ ರೀತಿಯ ವ್ಯವಸ್ಥೆ ಮಾಡಲು ಸಿದ್ಧತೆ ನಡೆಸಿದ್ದೇವೆ ಎಂದರು. ನಾವು ಮಾಡಿರುವ ಅಭಿವೃದ್ಧಿ ಕೆಲಸಗಳ ಪಟ್ಟಿ ಹಾಗೂ ಮುಂದೆ ಮಾಡಬೇಕಾದ ಕೆಲಸಗಳ ಪಟ್ಟಿ ಇಟ್ಟುಕೊಂಡು ಜನರ ಮುಂದೆ ಹೋಗಬೇಕಾದ ಕಾಲ ಈಗ ಬಂದಿದೆ. ಬೂತ್ ಹಾಗೂ ಮಂಡಳ ಮಟ್ಟದಲ್ಲಿ ಪಕ್ಷ ಸಂಘಟನೆ ಚುರುಕುಗೊಳಿಸಿ ಎಂದರು.

ಗುಜರಾತ್ ಚುನಾವಣೆ ಬಳಿಕ ಸಂಪುಟ ವಿಸ್ತರಣೆ

ಬೆಂಗಳೂರು, ನ.25– ಕೆಲ ತಿಂಗಳಿಂದ ರಾಜ್ಯ ಸಚಿವ ಸಂಪುಟ ವಿಸ್ತರಣೆಯನ್ನು ಮುಂದೂಡಿಕೊಂಡೆ ಬರಲಾಗುತ್ತಿದೆ. ಇತ್ತ ಸಂಪುಟ ವಿಸ್ತರಣೆ ಯಾವಾಗ ಮಾಡುತ್ತಾರೆ ಎಂದು ಸಚಿವಾಕಾಂಕ್ಷಿಗಳು ಕಾತುರದಿಂದ ಕಾಯುತ್ತಿದ್ದಾರೆ. ಶಿವಮೊಗ್ಗದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗುಜರಾತ್ ವಿಧಾನಸಭಾ ಚುನಾವಣೆ ನಂತರ ಸಂಪುಟ ವಿಸ್ತರಣೆ ಮಾಡಲಾಗುವುದು ಎಂದು ಹೇಳಿದ್ದಾರೆ. ಸಚಿವ ಸಂಪುಟ ವಿಸ್ತರಣೆಗಾಗಿ ಸಚಿವ ಸ್ಥಾನಸ ಆಕಾಂಕ್ಷಿಗಳು ಕಾಯುತ್ತಿದ್ದಾರೆ. 40 ಪರ್ಸೆಂಟ್ ಕಮಿಷನ್ ಆರೋಪದಿಂದ ಮಂತ್ರಿಗಿರಿ ಕಳೆದುಕೊಂಡ ಈಶ್ವರಪ್ಪ ಮತ್ತೆ ಸಂಪುಟ ಸೇರಲು ಕಾಯುತ್ತಿದ್ದಾರೆ. ಹೊನ್ನಾಳಿ ಬಿಜೆಪಿ ಶಾಸಕ ರೇಣುಕಾಚಾರ್ಯ, ಸಾಹುಕಾರ್ ರಮೇಶ ಜಾರಕಿಹೊಳಿ ಕೂಡ ಆಕಾಂಕ್ಷಿಗಳಾಗಿದ್ದಾರೆ.

ಯಾರೇ ತಪ್ಪು ಮಾಡಿದ್ದರೂ ಶಿಕ್ಷೆ ಆಗುತ್ತೆ ಮತದಾರರ ಪಟ್ಟಿ ದುರ್ಬಳಕೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತಾಡಿದ ಸಿಎಂ ಬಸವರಾಜ ಬೊಮ್ಮಾಯಿ ಅವರು ಈ ಬಗ್ಗೆ ತನಿಖೆ ತೀವ್ರವಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಎಲ್ಲಾ ವಿಚಾರಗಳನ್ನು ಸೂಕ್ಷ್ಮವಾಗಿ ತನಿಖೆ ನಡೆಸುವಂತೆ ಸೂಚಿಸಲಾಗಿದೆ. ಮುಕ್ತವಾಗಿ ತನಿಖೆ ನಡೆಸಲು ಬಿಟ್ಟಿದ್ದೇವೆ. ಇದರಲ್ಲಿ ಯಾರೇ ತಪ್ಪು ಮಾಡಿದ್ದರೂ ಶಿಕ್ಷೆ ಆಗುತ್ತದೆ ಎಂದು ಸಿಎಂ ಹೇಳಿದ್ದಾರೆ.

ಪದವಿ ಕಾಲೇಜು, ವಿವಿಗಳಲ್ಲಿ ಧ್ಯಾನ

ಬೆಂಗಳೂರು, ನ.25– ಕರ್ನಾಟಕ ಸರ್ಕಾರ ಶಾಲಾ–ಕಾಲೇಜುಗಳಲ್ಲಿ ಧ್ಯಾನ ಮಾಡಿಸುವ ಮಹತ್ವದ ನಿರ್ಧಾರ ತೆಗೆದುಕೊಂಡು ಬೆನ್ನಲ್ಲೇ ದೇಶದಾದ್ಯಂತ ಧ್ಯಾನ ಮಾಡಿಸುವ ಮಹತ್ವದ ನಿರ್ಧಾರಕ್ಕೆ ಕೇಂದ್ರ ಸರ್ಕಾರ ಬಂದಿದೆ.

ಇನ್ನು ಮುಂದೆ ದೇಶದ ವಿಶ್ವವಿದ್ಯಾಲಯಗಳು, ಪದವಿ ಕಾಲೇಜುಗಳಲ್ಲಿ ಧ್ಯಾನ ಮಾಡಿಸುವಂತೆ ಯುಜಿಸಿ ಎಲ್ಲಾ ವಿಶ್ವವಿದ್ಯಾಲಯಗಳು, ಪದವಿ ಕಾಲೇಜುಗಳು, ವಿದ್ಯಾಸಂಸ್ಥೆಗಳಿಗೆ ಸೂಚನೆ ನೀಡಿದೆ.

ಯುಜಿಸಿ ಕಾರ್ಯದರ್ಶಿ ಪ್ರೊ. ರಜನೀಶ್ ಜೈನ್‌ರಿಂದ ವಿಶ್ವವಿದ್ಯಾಲಯಗಳು, ಎಲ್ಲಾ ವಿದ್ಯಾಸಂಸ್ಥೆಗಳಿಗೆ ಪತ್ರ ಬರೆಯಲಾಗಿದೆ. 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ನೆನಪಿನಲ್ಲಿ ಈ ನಿರ್ಧಾರವನ್ನು ಕೇಂದ್ರ ಮಾಡಿದೆ.

ಧ್ಯಾನ ಮಾಡಿಸುವ ನಿಟ್ಟಿನಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಜೊತೆ ಕೇಂದ್ರ ಸಂಸ್ಕೃತಿಇಲಾಖೆ ಒಪ್ಪಂದ ಮಾಡಿಕೊಂಡಿದೆ. ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ವಿಶ್ವವಿದ್ಯಾಲಯಗಳು, ಪದವಿ ಕಾಲೇಜುಗಳಲ್ಲಿ ಹರ್ ಘರ್ ಧ್ಯಾನ್ ಅಭಿಯಾನ ನಡೆಸಲು ನಿರ್ಧಾರ ಮಾಡಲಾಗಿದೆ. ಆರ್ಟ್ ಆಫ್ ಲಿವಿಂಗ್ ಅಭಿವೃದ್ಧಿಪಡಿಸಿರೋ ಧ್ಯಾನದ ಮಾದರಿಗಳನ್ನು ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.

ಶಬರಿಮಲೆಗೆ ತೆರಳಿದ್ದ ಮಿನಿ ಬಸ್‌ಗೆ ಲಾರಿ ಡಿಕ್ಕಿ

23 ಭಕ್ತರಿಗೆ ಗಾಯ, ಇಬ್ಬರ ಸ್ಥಿತಿ ಗಂಭೀರ

ರಾಮನಗರ, ನ.25– ಶಬರಿಮಲೆಗೆ ತೆರಳಿದ್ದ ಅಯ್ಯಪ್ಪ ಭಕ್ತರ ಬಸ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ 23 ಭಕ್ತರಿಗೆ ಗಾಯಗಳಾಗಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿರುವಂತಹ ಘಟನೆ ಕೇರಳದ ಕಣ್ಣೂರಿನ ಪೊನ್ನೂರು ಬಳಿ ನಡೆದಿದೆ.

ಶಬರಿಮಲೆ ದರ್ಶನ ಮುಗಿಸಿ ಕರ್ನಾಟಕಕ್ಕೆ ಹಿಂದಿರುಗುತ್ತಿದ್ದ ರಾಮನಗರ ತಾಲೂಕಿನ ಪೇಟೆಕುರುಬರಹಳ್ಳಿಯ ಅಯ್ಯಪ್ಪ ಮಾಲಾಧಾರಿಗಳ ಬಸ್ ಇಟ್ಟಿಗೆ ತುಂಬಿಕೊಂಡು ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಮಿನಿ ಬಸ್ ಮುಂಭಾಗ ಸಂಪೂರ್ಣ ಜಖಂ ಆಗಿದ್ದು ಮಿನಿ ಬಸ್ ಚಾಲಕ ಸೇರಿ ಮತ್ತೋರ್ವನಿಗೆ ಗಂಭೀರ ಗಾಯವಾಗಿದೆ. ಗಾಯಾಳು ಭಕ್ತರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ನವೆಂಬರ್ 20ರ ರಾತ್ರಿ ಶಬರಿಮಲೆ ದರ್ಶನಕ್ಕೆಂದು ಮಾಲೆ ಧರಿಸಿ ತೆರಳಿದ್ದರು. ಶಬರಿಮಲೆ ದರ್ಶನ ಮುಗಿಸಿಕೊಂಡು ಧರ್ಮಸ್ಥಳದತ್ತ ಬರುವಾಗ ಅವಘಡ ಸಂಭವಿಸಿದೆ. ಅವಘಾತದ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಪೊನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಈಗ ನಂದಿನಿ 'ಬಿಸಿ' ತುಪ್ಪ!

ಕೆಎಂಎಫ್‌ನ ಎಲ್ಲ ಉತ್ಪನ್ನಗಳ ದರ ಏರಿಕೆ



ಬೆಂಗಳೂರು, ನ.25– ಗ್ರಾಹಕರಿಗೆ ಹಾಲು, ಮೊಸರಿನ ದರದ ಬಿಸಿ ತಟ್ಟಿದೆ. ಇದರ ಮಧ್ಯೆ ಕೆಎಂಎಫ್ ಎಲ್ಲ ಇತರ ಉತ್ಪನ್ನಗಳ ದರವನ್ನೂ ಏರಿಕೆ ಮಾಡಿದೆ. ಹಾಲು, ಮೊಸರಿನ ದರವನ್ನು ಲೀಟರ್‌ಗೆ ಎರಡು ರೂ. ಹೆಚ್ಚು ಮಾಡಿತ್ತು ದಸರಾ ಹಬ್ಬದಿಂದಲೂ ತುಪ್ಪದ ದರ ಹೆಚ್ಚಾಗುತ್ತಲೇ ಇದೆ. ಒಮ್ಮೆಗೆ ದರ ಏರಿಕೆ ಮಾಡದೇ ಕಳೆದ 2 ತಿಂಗಳಿನಲ್ಲಿ 4 ಬಾರಿ ಹಂತ–ಹಂತವಾಗಿ ತುಪ್ಪದ ದರ ಏರಿಕೆ ಮಾಡಿದೆ. ಸದ್ಯ ಒಟ್ಟು 170 ರೂ.ವರೆಗೆ ದರ ಹೆಚ್ಚಳ ಮಾಡಿದೆ. ಕೇವಲ ತುಪ್ಪ ಮಾತ್ರವಲ್ಲ ಇದೀಗ ಕೆಎಂಎಫ್‌ನ ಎಲ್ಲ ಉತ್ಪನ್ನಗಳ ದರವೂ ಶೇ.5 ರಿಂದ 15 ರಷ್ಟು ಏರಿಕೆ ಕಂಡಿದೆ. ಒಂದು ಕೆಜಿಗೆ ತುಪ್ಪದ ದರ 50 ರೂ. ಹೆಚ್ಚಳವಾಗುವ ಸಾಧ್ಯತೆಯಿದೆ.

ದರ ಏರಿಕೆ ಪ್ರಮಾಣ....

ಪೇಡ: ಹಿಂದಿನ ದರ 220ರೂ.– ಈಗಿನ ದರ 240 ರೂ. (1/4 ಕೆ.ಜಿ), **ಬಾದಾಮ್ ಪೌಡರ್:** ಹಿಂದಿನ ದರ 400 ರೂ. – ಈಗಿನ ದರ 440 ರೂ. (1 ಕೆ.ಜಿಗೆ 40 ರೂ. ಹೆಚ್ಚಳ), **ಕೋಡ್ಬಳೆ:** ಹಿಂದಿನ ದರ 500 ರೂ. – ಈಗಿನ ದರ 600 ರೂ. (200 ಗ್ರಾಂ.), **ರಸ್ಕ್:** ಹಿಂದಿನ ದರ 15 ರೂ. – ಈಗಿನ ದರ 29 ರೂ. (100 ಗ್ರಾಂ.), **ಜಾಮೂನು:** ಹಿಂದಿನ ದರ 130 ರೂ.– ಈಗಿನ ದರ 150 ರೂ. (1/2 ಕೆ.ಜಿ), **ಫ್ಲೇವರ್ಡ್ ಮಿಲ್ಕ್:** ಹಿಂದಿನ ದರ 20 ರೂ. – ಈಗಿನ ದರ 25 ರೂ. (200 ಎಂಎಲ್‌ಗೆ 5 ರೂ. ಹೆಚ್ಚಳ), **ರಸಗುಲ್ಲ:** ಹಿಂದಿನ ದರ 130 ರೂ. – ಈಗಿನ ದರ 150 ರೂ. (1/4 ಕೆ.ಜಿ), **ಬರ್ಫಿ:** ಹಿಂದಿನ ದರ 195 ರೂ. – ಈಗಿನ ದರ 210 ರೂ. (1/4 ಕೆ.ಜಿ), **ಗುಡ್‌ಲೈಫ್:** ಹಿಂದಿನ ದರ 26 ರೂ.– ಈಗಿನ ದರ 28 ರೂ. ಪ್ರತಿ ಲೀಟರ್‌ಗೆ, **ಮೈಸೂರು ಪಾಕ್:** ಹಿಂದಿನ ದರ 135 ರೂ. – ಈಗಿನ ದರ 160 ರೂ. (1/4 ಕೆ.ಜಿ), **ಕೋವಾ:** ಹಿಂದಿನ ದರ 60 ರೂ. – ಈಗಿನ ದರ 90ರೂ. (200 ಗ್ರಾಂ).

2 ದಿನಗಳ ಕರ್ನಾಟಕ ಮೆಡಿಕೋ-ಲೀಗಲ್ ಸೊಸೈಟಿ ಸಮ್ಮೇಳನಕ್ಕೆ ಚಾಲನೆ

ನ್ಯಾಯ ದಾನದಲ್ಲಿ 'ವಿಧಿವಿಜ್ಞಾನ' ಪ್ರಬಲ ಅಸ್ತ್ರ

● ನಾಶಪಡಿಸುವ ಸಾಕ್ಷ್ಯ ಮರು ಪಡೆಯುವಲ್ಲಿ ವಿಧಿವಿಜ್ಞಾನದಿಂದ ಮಹತ್ತರ ಪಾತ್ರ ● ಉಪಲೋಕಾಯುಕ್ತ ನ್ಯಾ.ಕೆ.ಎನ್.ಫಣೀಂದ್ರ ಅಭಿಮತ



ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ 'ಕೊಲಾಬ್ರೇಟಿವ್ ಫೋರೆನ್ಸಿಕ್ಸ್' ಕುರಿತಂತೆ ಹಮ್ಮಿಕೊಂಡಿರುವ ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿಯ ಎರಡು ದಿನಗಳ ಸಮ್ಮೇಳನಕ್ಕೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ (ಎಡದಿಂದ 4ನೇಯವರು) ಶುಕ್ರವಾರ ಚಾಲನೆ ನೀಡಿದರು. (ಎಡದಿಂದ) ಸೊಸೈಟಿ ಖಜಾಂಚಿ ಡಾ.ಸ್ಮಿತಾರಾಣಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಸೊಸೈಟಿ ಅಧ್ಯಕ್ಷ ಡಾ.ಎಂ.ಅರುಣ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಸುರೀಂದರ್ ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಹೆಚ್.ವಿ.ಚಂದ್ರಕಾಂತ್ ಚಿತ್ರದಲ್ಲಿದ್ದಾರೆ.

ಮೈಸೂರು,ನ.25(ಪಿಎಂ)–ವಿಧಿವಿಜ್ಞಾನವು (ಫೋರೆನ್ಸಿಕ್ ಸೈನ್ಸ್) ನ್ಯಾಯಾಂಗದ ಶಸ್ತ್ರಾಗಾರದಲ್ಲಿರುವ ಪ್ರಬಲ ಅಸ್ತ್ರ ವಿಧಿವಿಜ್ಞಾನದ ವಿಶ್ಲೇಷಣಾ ಪ್ರಕ್ರಿಯೆಗಳು ನ್ಯಾಯದಾನದಲ್ಲಿ ಮಹತ್ತರ ಪಾತ್ರ ವಹಿಸಲಿವೆ ಎಂದು ಕರ್ನಾಟಕ ಉಪಲೋಕಾಯುಕ್ತರೂ ಆದ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ವತಿಯಿಂದ 'ಸಹಕಾರಿ ನ್ಯಾಯಶಾಸ್ತ್ರ (ಕೊಲಾಬ್ರೇಟಿವ್ ಫೋರೆನ್ಸಿಕ್ಸ್/ವಿಧಿವಿಜ್ಞಾನ)' ವಿಷಯ ಕುರಿತಂತೆ ಹಮ್ಮಿಕೊಂಡಿರುವ ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿಯ ಎರಡು ದಿನಗಳ ರಾಜ್ಯ ಮಟ್ಟದ 30ನೇ ವಾರ್ಷಿಕ ಸಮ್ಮೇಳನಕ್ಕೆ ಶುಕ್ರ ವಾರ ಚಾಲನೆ ನೀಡಿ ಮಾತನಾಡಿದರು. ವಿಧಿವಿಜ್ಞಾನವು ಕಾನೂನು ವ್ಯವಸ್ಥೆಯ ಮಾನದಂಡ ಗಳಡಿಯಲ್ಲಿ ಕಾರ್ಯನಿರ್ವಹಿಸುವ ಒಂದು ಶಿಸ್ತಿನ ಕಾರ್ಯ. ▶ 9ನೇ ಪುಟಕ್ಕೆ

ನಿರ್ಮಾಣಗೊಂಡಿದ್ದರೂ ಸಂತ್ರಸ್ತರಿಗೆ ಸಿಗದ ಮನೆಗಳು

ಮುಖ್ಯಮಂತ್ರಿಗಳಿಂದ ಉದ್ಘಾಟಿಸಲು ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ಜೆಡಿಎಸ್ ಆರೋಪ

ಮನೆ ಕೊಡಿ, ರಸ್ತೆ ರಿಪೇರಿ ಮಾಡಿಸಿ ಎಂದು ನ.28ಕ್ಕೆ ಪ್ರತಿಭಟನೆ



ಮಡಿಕೇರಿ,ನ.25– ಕೊಡಗಿನಲ್ಲಿ 2018ರಲ್ಲಿ ಘಟಿಸಿದ ಪ್ರಾಕೃತಿಕ ವಿಕೋಪದಲ್ಲಿ ನೆಲೆ ಕಳೆದುಕೊಂಡಿದ್ದವರಿಗೆ ಮಡಿಕೇರಿ ನಗರ ದಂಚಿನ ಕೆ.ನಿಡುಗಣೆಯಲ್ಲಿ ನಿರ್ಮಿಸಲಾಗಿರುವ 70 ಮನೆಗಳನ್ನು ಮುಖ್ಯಮಂತ್ರಿಗಳಿಂದ ಉದ್ಘಾಟಿಸಬೇಕೆನ್ನುವ ಏಕೈಕ ಕಾರಣಕ್ಕಾಗಿ ವಿತರಿಸದೆ ವಿಳಂಬ ನೀತಿಯನ್ನು ಆಡಳಿತ ಪಕ್ಷ ಅನುಸರಿಸುತ್ತಿದೆ ಎಂದು ಜಿಲ್ಲಾ ಜನತಾ ದಳದ ಅಧ್ಯಕ್ಷ ಕೆ.ಎಂ.ಗಣೇಶ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ನಿಡುಗಣೆಯಲ್ಲಿ ನಿರ್ಮಿಸಲಾದ ಮನೆಗಳನ್ನು ತಕ್ಷಣವೇ ಫಲಾನುಭವಿಗಳಿಗೆ ವಿತರಿಸಬೇಕು. ಜಿಲ್ಲಾ ವ್ಯಾಪ್ತಿಯ ಹದಗೆಟ್ಟ ರಸ್ತೆಗಳನ್ನು ಶೀಘ್ರ ದುರಸ್ತಿಪಡಿಸಬೇಕೆಂದು ಆಗ್ರಹಿಸಿ ನ.28ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ವಾರದ ಒಳಗಾಗಿ ನಮ್ಮ ಬೇಡಿಕೆಗೆ ಸೂಕ್ತ ಸ್ಪಂದಿಸದಿದ್ದಲ್ಲಿ ಉಪವಾಸ ಮುಷ್ಕರ ನಡೆಸುವುದಾಗಿಯೂ ಎಚ್ಚರಿಕೆ ನೀಡಿದರು.

ಪ್ರಾಕೃತಿಕ ವಿಕೋಪದಿಂದ ನೆಲೆ ಕಳೆದುಕೊಂಡವರಿಗಾಗಿ ಕೆ.ನಿಡುಗಣೆಯಲ್ಲಿ ಸರ್ಕಾರದಿಂದ ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದ್ದು, ಎಲ್ಲಾ ಮನೆಗಳು 2 ತಿಂಗಳ ಹಿಂದೆಯೇ ಪೂರ್ಣಗೊಂಡಿವೆ ಹೀಗಿದ್ದೂ ಬಿಜೆಪಿ ನೇತೃತ್ವದ ಸರ್ಕಾರದ ಮುಖ್ಯಮಂತ್ರಿಗಳಿಂದಲೇ ಮನೆಗಳ ಉದ್ಘಾಟನೆಯಾಗಬೇಕೆನ್ನುವ ಕಾರಣದಿಂದ ಮನೆಗಳ ಹಸ್ತಾಂತರ ಕಾರ್ಯ ನಡೆದಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಹದಗೆಟ್ಟ ರಸ್ತೆಗಳು: ಬಿಜೆಪಿ ನೇತೃತ್ವದ ಸಕಾರದ ಅವಧಿಯಲ್ಲಿ ಜಿಲ್ಲೆಯ ರಸ್ತೆಗಳು ನಿರ್ವಹಣೆ ಇಲ್ಲದೆ ಸಂಪೂರ್ಣ ಹದಗೆಟ್ಟು ಹೋಗಿವೆ. ಮಡಿಕೇರಿ–ವಿರಾಜಪೇಟೆ, ವಿರಾಜಪೇಟೆ–ಸಿದ್ದಾಪುರ ರಸ್ತೆ, ಸೋಮವಾರಪೇಟೆ ರಸ್ತೆ ಹೀಗೆ ಜಿಲ್ಲೆಯ ಪ್ರಮುಖ ರಸ್ತೆಗಳು ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿದೆ. ಇವುಗಳ ದುರಸ್ತಿಗೆ ಇಲ್ಲಿಯವರೆಗೆ ಗಮನ ಹರಿಸದ ಆಡಳಿತ ಪಕ್ಷದ ಜನಪ್ರತಿನಿಧಿಗಳು ಇದೀಗ ದುರಸ್ತಿ ಕಾರ್ಯದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.


ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ನಗರೋತ್ಥಾನದ 4ನೇ ಹಂತದ ಕಾಮಗಾರಿಗಳು ಇನ್ನಷ್ಟೆ ನಡೆಯಬೇಕಾಗಿದೆ ಎಂದು ತಿಳಿಸಿದ ಕೆ.ಎಂ.ಗಣೇಶ್, ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವಲ್ಲಿ ಜಿಲ್ಲಾಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಪ್ರಮುಖ ವಿಚಾರಗಳನ್ನು ಮುಂದಿಟ್ಟುಕೊಂಡು ನಡೆಸುವ ಪ್ರತಿಭಟನೆಯಲ್ಲಿ ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ನರಸಿಂಹ ಮೂರ್ತಿ, ಜೆಡಿಎಸ್ ವಕ್ತಾರ ಸಂಕೇತ್ ಪೂವಯ್ಯ ಸೇರಿದಂತೆ ಹಲ ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಗಣೇಶ್ ತಿಳಿಸಿದರು.

ಅಭ್ಯರ್ಥಿ ಪರ ಪ್ರಚಾರ: ಮುಂದಿನ ವಿಧಾನ ಸಭಾ ಚುನಾವಣೆಗೆ ಜೆಡಿಎಸ್ ಹೈಕಮಾಂಡ್ ಸೂಚಿಸುವ ಅಭ್ಯರ್ಥಿಯ ಗೆಲುವಿಗಾಗಿ ಜಿಲ್ಲಾ ಜೆಡಿಎಸ್ ಕಟಿಬದ್ಧವಾಗಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದ ಗಣೇಶ್, ವಿಧಾನ ಸಭಾ ಚುನಾವಣೆಯ ಸ್ಪರ್ಧೆಗೆ ತಾನು ಆಕಾಂಕ್ಷಿಯಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಪ್ರಸ್ತುತ ಮಡಿಕೇರಿ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾಧ್ಯಕ್ಷ ಇಸಾಕ್ ಖಾನ್ ಅವರು ಆಕಾಂಕ್ಷೆ ಹೊಂದಿದ್ದಾರೆ ಉಳಿದಂತೆ ಇಲ್ಲಿಯವರೆಗೆ ಜಿಲ್ಲಾ ಜೆಡಿಎಸ್‌ಗೆ ಯಾವುದೇ ಚುನಾವಣಾ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿಲ್ಲವೆಂದು ಗಣೇಶ್ ಸ್ಪಷ್ಟಪಡಿಸಿದರು.

ಜಾತಿ ರಾಜಕಾರಣ ನಡೆಯಲ್ಲ: ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಇಸಾಕ್ ಖಾನ್ ಮಾತನಾಡಿ, ತಾನು ಮಡಿಕೇರಿ ಕ್ಷೇತ್ರದ ಚುನಾವಣಾ ಸ್ಪರ್ಧಾಕಾಂಕ್ಷಿ. ಆದರೆ, ವಿರಾಜಪೇಟೆ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಸಮೂಹ ಹೆಚ್ಚಾಗಿದೆ ಎನ್ನುವ ಕಾರಣಕ್ಕೆ ಅಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡಬೇಕೆನ್ನುವ ಬೇಡಿಕೆ ಇಟ್ಟಿಲ್ಲ. ಕೇವಲ ಅಲ್ಪಸಂಖ್ಯಾತ ಮತಗಳಿಂದ ಕ್ಷೇತ್ರದಲ್ಲಿ ಗೆಲುವು ಕಾಣುವುದು ಅಸಾಧ್ಯ. ಜಿಲ್ಲೆಯಲ್ಲಿ ಜಾತಿ ರಾಜಕಾರಣ ನಡೆಯಲ್ಲ. ಜಾತಿ ರಾಜಕಾರಣವಿದ್ದದ್ದೇ ಆಗಿದ್ದಲ್ಲಿ ಅಪ್ಪಚ್ಚು ರಂಜನ್ ಅವರು ಮಡಿಕೇರಿ ಕ್ಷೇತ್ರದಿಂದ ನಿರಂತರವಾಗಿ ಗೆಲುವು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ಅಭಿಪ್ರಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಶಾಲನಗರ ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಡಿ.ರವಿ, ವಿರಾಜಪೇಟೆ ತಾಲೂಕು ಅಧ್ಯಕ್ಷ ಮಂಜುನಾಥ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಗಣೇಶ್, ಜಿಲ್ಲಾ ಯುವ ಜೆಡಿಎಸ್ ವಕ್ತಾರ ರವಿ ಕಿರಣ್ ರೈ ಉಪಸ್ಥಿತರಿದ್ದರು.



ಗುಡ್ಡೆಹೊಸೂರು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜಾ ಕಾರ್ಯಕ್ರಮ ನಡೆಯಿತು. ಪೂಜೆಯನ್ನು ಕುಶಾಲನಗರದ ಶ್ರೀ ಸೋಮೇಶ್ವರ ದೇವಸ್ಥಾನದ ಅರ್ಚಕ ಮಂಜುನಾಥ್ ಭಟ್ ನೆರವೇರಿಸಿದರು. ಈ ಸಂದರ್ಭ ಎಸ್‌ಡಿಎಂಸಿ ಅಧ್ಯಕ್ಷ ಪರಮೇಶ್, ಸದಸ್ಯರು, ಪೋಷಕರು ಮತ್ತು ಶಿಕ್ಷಕ ವೃಂದ ಹಾಜರಿದ್ದರು.

ಹೆಬ್ಬಾಲೆಯಲ್ಲಿ ವಿದ್ಯುತ್ ಶಾಕ್‌ನಿಂದ ಶಿಕ್ಷಕ ಸಾವು



ಕುಶಾಲನಗರ, ನ.25– ಹೆಬ್ಬಾಲೆ ಗ್ರಾಮ ದೇವತೆ ಶ್ರೀ ಬನಶಂಕರಿ ಅಮ್ಮನವರ ಹಬ್ಬದ ಅಂಗವಾಗಿ ತಮ್ಮ ಮನೆಗೆ ಲೈಟಿಂಗ್ ಅಳವಡಿಸುತ್ತಿದ್ದ ವೇಳೆ ವಿದ್ಯುತ್ ಶಾಕ್‌ನಿಂದ ಶಿಕ್ಷಕನೋರ್ವ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಶುಕ್ರವಾರ ರಾತ್ರಿ ನಡೆದಿದೆ. ಹೆಬ್ಬಾಲೆ ಗ್ರಾಮದ ಹೊಸ ಬೀದಿ ನಿವಾಸಿ ಮೊಗಣ್ಣ ಎಂಬುವವರ ಮಗ ಶಿಕ್ಷಕ ಎಚ್.ಎಂ.ಗಿರೀಶ್(43) ಮೃತಪಟ್ಟ ದುರ್ದೈವಿ.

ಗಿರೀಶ್ ಚಿಕ್ಲಿಹೊಳೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದ. ಈ ಹಿಂದೆ ಹೆಬ್ಬಾಲೆ ಕ್ಲಸ್ಟರ್ ಕೇಂದ್ರದ ಸಿಆರ್‌ಪಿಯಾಗಿ ಸೇವೆ ಸಲ್ಲಿಸಿದ್ದರು. ಈತನ ಪತ್ನಿ ಕೂಡ ಶಿಕ್ಷಕಿಯಾಗಿದ್ದಾಳೆ. ಪತ್ನಿ ಸೇರಿದಂತೆ ಇಬ್ಬರು ಮಕ್ಕಳು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ವರ್ಷಕ್ಕೊಮ್ಮೆ ಅದ್ದೂರಿಯಾಗಿ ಆಚರಿಸುವ ಗ್ರಾಮ ದೇವತೆ ಹಬ್ಬದ ದಿನವೇ ಶಿಕ್ಷಕ ದುರ್ಮರಣ ಹೊಂದಿರುವುದು ಅವರ ಕುಟುಂಬ ಹಾಗೂ ಬಂಧುವರ್ಗವನ್ನು ದುಃಖದ ಮಡುವಿಗೆ ತಳ್ಳಿದ್ದು, ಶೋಕಸಾಗರದಲ್ಲಿ ಮುಳುಗಿದ್ದು, ಸೂತಕದ ಛಾಯೆ ಆವರಿಸಿದೆ. ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದ ಶವಗಾರಕ್ಕೆ ಸಾಗಿಸಲಾಗಿದೆ.

ಮಹಿಳಾ ಕಾರ್ಮಿಕರಿಗೆ ಪೌಷ್ಟಿಕಾಂಶ ಕಿಟ್ ವಿತರಣೆ



ವಿರಾಜಪೇಟೆ, ನ.25– ಕಟ್ಟಡ ಮತ್ತು ಇತರ ನಿರ್ಮಾಣ ಬಡ ಕುಟುಂಬದ ಕಾರ್ಮಿಕರು ಅದರಲ್ಲಿಯು ಮಹಿಳಾ ಕಾರ್ಮಿಕರು ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದೆ ಬರಬೇಕು ಎಂದು ವಿರಾಜಪೇಟೆ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಸಿ.ಮಾದಪ್ಪ ಕರೆ ನೀಡಿದರು.

ಕಾರ್ಮಿಕ ಇಲಾಖೆಯ ಕಲ್ಯಾಣ ಮಂಡಳಿ ವತಿಯಿಂದ ವಿರಾಜಪೇಟೆ ನಗರದಲ್ಲಿರುವ ಬೋರೇಗೌಡ ಕಾಂಪ್ಲೆಕ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ 'ಮಹಿಳಾ ಕಾರ್ಮಿಕರಿಗೆ ಪೌಷ್ಟಿಕಾಂಶ ಕಿಟ್ ವಿತರಣೆ' ಕಾರ್ಯಕ್ರಮದಲ್ಲಿ ಮಹಿಳಾ ಕಾರ್ಮಿಕರಿಗೆ 'ಪೌಷ್ಟಿಕಾಂಶ ಕಿಟ್' ವಿತರಿಸಿ ಮಾತನಾಡಿ, ಕಟ್ಟಡ ಕಾರ್ಮಿಕರು ತಮ್ಮ ಸದಸ್ಯತ್ವವನ್ನು ನೋಂದಣಿ ಮಾಡಿಕೊಳ್ಳುವ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದರು. ಸರಕಾರ 60 ವರ್ಷ ಪೂರೈಸಿದ ಫಲಾನುಭವಿ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ, ವೈದ್ಯಕೀಯ ಸಹಾಯಧನ, ಅಪಘಾತ ಪರಿಹಾರ, ಕೆಎಸ್‌ಆರ್‌ಟಿಸಿ ಬಸ್ ಪಾಸ್ ಸೌಲಭ್ಯಗಳನ್ನು ನೀಡಲಾಗುವುದು ಎಂದ ಅವರು ನಕಲಿ ದಾಖಲೆಗಳನ್ನು ನೀಡಿ ಸೌಲಭ್ಯಗಳನ್ನು ಪಡೆದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಕಾರ್ಮಿಕ ಕಚೇರಿಯ ಸಹಾಯಕ ಅಧಿಕಾರಿ ಎಸ್.ನವಿನ್, ಕಟ್ಟಡ ಕಾರ್ಮಿಕ ಜಿಲ್ಲಾ ಸಮಿತಿಯ ಅಧ್ಯಕ್ಷ ಸಿ.ಜಿ.ವರ್ಗಿಸ್ ಮತ್ತು ಇತರ ಸದಸ್ಯರುಗಳು ಹಾಜರಿದ್ದರು. ಕಾರ್ಯಕ್ರಮದಲ್ಲಿ ತಾಲೂಕಿನ 530 ಮಹಿಳಾ ಕಾರ್ಮಿಕರಿಗೆ ಪೌಷ್ಟಿಕಾಂಶ ಕಿಟ್ ವಿತರಿಸಲಾಯಿತು.

ಕೆಎಸ್‌ಆರ್‌ಪಿ ಅಧಿಕಾರಿ ಹೃದಯಾಘಾತದಿಂದ ನಿಧನ



ಮಡಿಕೇರಿ,ನ.25– ಕೆಎಸ್‌ಆರ್‌ಪಿ ಅಧಿಕಾರಿ ಸೋಮವಾರಪೇಟೆ ಹಾನಗಲ್ ಶೆಟ್ಟಳ್ಳಿ ನಿವಾಸಿ ಹೆಚ್.ಎಂ.ಆನಂದ್(58) ಅವರು ಗುರುವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

11ನೇ ಕೆಎಸ್‌ಆರ್‌ಪಿ ಬೆಟಾಲಿಯನ್‌ನಲ್ಲಿ ಹಾಸನದಲ್ಲಿ ಎಎಸ್‌ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಇವರು 1992ರಲ್ಲಿ ಕೆಎಸ್‌ಆರ್‌ಪಿ ಸೇವೆಗೆ ಸೇರ್ಪಡೆಗೊಂಡಿದ್ದರು. ವೀರಪ್ಪನ್ ಕಾರ್ಯಾಚರಣೆಯ ಎಸ್‌ಟಿಎಫ್‌ನಲ್ಲಿ 5 ವರ್ಷ ಸೇವೆ ಸಲ್ಲಿಸಿರುವ ಆನಂದ್, ಮೈಸೂರು, ಮಂಗಳೂರು ಹಾಗೂ ಹಾಸನದಲ್ಲಿ ಕರ್ತವ್ಯ ನಿಭಾಯಿಸಿದ್ದಾರೆ. ಮೃತರು ಪತ್ನಿ ಹಾಗೂ ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆದಿದೆ.

ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಿ: ದೇವರಾಜು



ಕೆ.ಆರ್.ಪೇಟೆ, ನ.25– ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ತಪ್ಪಿಸಿಕೊಂಡು ನಮ್ಮ ಅಸ್ಮಿತೆ ಕಾಪಾಡಿಕೊಳ್ಳಬೇಕಾದರೆ ಪ್ರಾದೇಶಿಕ ಪಕ್ಷಗಳ ಅಗತ್ಯವಿದ್ದು, ಮಾಜಿ ಪ್ರಧಾನಿ ದೇವೇಗೌಡರ ಮುತ್ಸದಿತನದಿಂದ ಉಳಿದಿರುವ ಜೆಡಿಎಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು ಮನವಿ ಮಾಡಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕನ್ನಡ ನಾಡು ಉಳಿಸಿ ಪ್ರಾದೇಶಿಕ ಪಕ್ಷ ಬೆಳೆಸಿ ಎಂಬ ಸಪ್ತ ಸಂಕಲ್ಪ ಕಂಕಣ ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಒಕ್ಕೂಟ ವ್ಯವಸ್ಥೆ ಮತ್ತು ವಿವಿಧತೆಯಲ್ಲಿ ಏಕತೆ ಇರುವ ಈ ದೇಶಕ್ಕೆ ಪ್ರಾದೇಶಿಕ ಪಕ್ಷಗಳು ಅಗತ್ಯ. ದೇಶದ ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಪ್ರಬಲವಾಗಿವೆ. ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಒರಿಸ್ಸಾ ಹೀಗೆ 10 ಹಲವು ರಾಜ್ಯಗಳಲ್ಲಿ ಯಶಸ್ವಿಯಾಗಿದ್ದರೂ, ನಮ್ಮ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಬಿಟ್ಟರೆ ಸ್ಥಾಪನೆಗೊಂಡ ಬಹುತೇಕ ಪ್ರಾದೇಶಿಕ ಪಕ್ಷಗಳು ನೆಲಕಚ್ಚಿವೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಾದೇಶಿಕ ಪಕ್ಷಗಳ ಬೆಳವಣಿಗೆಗೆ ದೊಡ್ಡ ಅಡ್ಡಿಯನ್ನುಂಟು ಮಾಡುತ್ತಿದ್ದು ಕಾರ್ಯಕರ್ತರು ಇದನ್ನು ಮೆಟ್ಟಿ ನಿಂತರೆ ಮಾತ್ರ ಪ್ರಾದೇಶಿಕ ಪಕ್ಷ ಉಳಿಯಲು ಸಾಧ್ಯ ಎಂದರು.

ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್ ಮಾತನಾಡಿ, ರಾಜ್ಯದ ಏಕೈಕ ಪ್ರಾದೇಶಿಕ ಪಕ್ಷ ಜೆಡಿಎಸ್ ಅನ್ನು ಉಳಿಸಿ, ಬೆಳೆಸಬೇಕಾದ ಹಿನ್ನೆಲೆಯಲ್ಲಿ ಈ ಸಂಕಲ್ಪ ಕಂಕಣ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಾಗಿ ಯುವಕರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವುದು, ಜೆಡಿಎಸ್ ಪಕ್ಷದ ಮಹತ್ವ, ನಾಡು–ನುಡಿಯ ಮಹತ್ವದ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಿ ಗ್ರಾಮ ಮಟ್ಟದಲ್ಲಿ ಗ್ರಾಮಗಳ ಮನೆ ಬಾಗಿಲಿಗೆ ಹೋಗಿ ಪಕ್ಷದ ಧ್ಯೇಯ ಒಪ್ಪಿಗೆಯಾದವರಿಗೆ ಕಂಕಣ ಕಟ್ಟಿಸಿ ಸಂಕಲ್ಪ ಮಾಡಿಸುವ ಮೂಲಕ ಜೆಡಿಎಸ್ ಪಕ್ಷ ಸಂಘಟಿಸುವ ಉದ್ದೇಶ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಜಿಪಂ ಮಾಜಿ ಸದಸ್ಯ ರಾಮದಾಸ್, ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಂಗಾಧರ್, ಚಂದ್ರಶೇಖರ್, ದರ್ಶನ್, ಕಸಬಾ ಹೋಬಳಿ ಜೆಡಿಎಸ್ ಅಧ್ಯಕ್ಷ ವಸಂತ್‌ಕುಮಾರ್, ಸುಬ್ಬೇಗೌಡ, ವಿಶ್ವನಾಥ್, ಸಾಗರ್, ಬಸವಲಿಂಗ, ಈರೇಗೌಡ, ಕುಮಾರಣ್ಣ, ದರ್ಶನ್, ಸತೀಶ್, ಧನಂಜಯ್ ಹೃತ್ವಿಕ್ ಸೇರಿದಂತೆ ಇತರರಿದ್ದರು.

ಕೆಆರ್‌ಎಸ್ ಮಾದರಿ ತೊಣ್ಣೂರು ಕೆರೆ ಅಭಿವೃದ್ಧಿ

ಕೆರೆ ಭರ್ತಿ ಹಿನ್ನೆಲೆ: ಶಾಸಕ ಸಿಎಸ್‌ಪಿ ದಂಪತಿ ಬಾಗೀನ



ಪಾಂಡವಪುರ, ನ.25– ವಿಶ್ವವಿಖ್ಯಾತ ಕೆಆರ್‌ಎಸ್ ಮಾದರಿಯಲ್ಲಿ ಐತಿಹಾಸಿಕ ತೊಣ್ಣೂರು ಕೆರೆಯನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಸಿ.ಎಸ್. ಪುಟ್ಟರಾಜು ತಿಳಿಸಿದರು.

ತಾಲೂಕಿನ ತೊಣ್ಣೂರು ಕೆರೆ ಭರ್ತಿಯಾದ ಹಿನ್ನೆಲೆಯಲ್ಲಿ ಪತ್ನಿ ನಾಗಮ್ಮ ಅವರೊಂದಿಗೆ ಕೆರೆಗೆ ಬಾಗೀನ ಅರ್ಪಿಸಿ ಮಾತನಾಡಿದ ಅವರು, ಇತ್ತೀಚೆಗೆ ಸುರಿದ ಮಳೆಯಿಂದಾಗಿ ಕೆರೆ ಭರ್ತಿಯಾದ ಹಿನ್ನೆಲೆಯಲ್ಲಿ ಬಾಗೀನ ಅರ್ಪಿಸಲಾಗಿದೆ. ಕೆರೆಗೆ ಅಧಿಕ ಪ್ರಮಾಣದ ಮಳೆ ನೀರು ಹರಿದು ಬಂದು ಕೆರೆ ನೀರು ಕೋಡಿಬಿದ್ದು, ಅಪಾರ ಬೆಳೆ ನಷ್ಟ ಉಂಟಾಗಿತ್ತು. ಇದನ್ನು ಮನಗಂಡು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದೆ. ಕೆರೆಯನ್ನು ಕೆಆರ್‌ಎಸ್ ಮಾದರಿ ಅಭಿವೃದ್ಧಿಪಡಿಸಲಾಗುವುದು. ಕೆಆರ್‌ಎಸ್‌ನಲ್ಲಿರುವ ಸ್ವಯಂ ಚಾಲಿತ ಗೇಟ್ ಮಾದರಿ ಕೆರೆಗೆ ಗೇಟ್ ನಿರ್ಮಿಸಲಾಗುವುದು ಜೊತೆಗೆ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದರು.

ಈ ಹಿಂದೆ ಕೆರೆ ಭರ್ತಿಯಾಗಿ ಅಪಾಯದ ಮಟ್ಟ ಮೀರಿದಾಗ ತಜ್ಞರ ಸಲಹೆಯಂತೆ ನೀರು ಹೊರಹಾಕಲು ವೈಜ್ಞಾನಿಕವಾಗಿ ಪ್ರಯತ್ನಿಸಿದಾಗ ಕೆಲವರು ನನ್ನ ವಿರುದ್ಧ ಅಪಪ್ರಚಾರ ಮಾಡಿದರು. ಕೆರೆ ರಕ್ಷಣೆ ಮಾಡಲು ಸಾಕಷ್ಟು ಪ್ರಯತ್ನಿಸುತ್ತಿದ್ದೇನೆ ಹೊರತು ಕೆರೆಗೆ ಅಪಾಯ ಮಾಡಬೇಕು ಎಂಬ ಯಾವುದೇ ಆಲೋಚನೆ ನಮ್ಮಲ್ಲಿಲ್ಲ. ನನ್ನ ವಿರುದ್ಧ ಅಪಪ್ರಚಾರ ಮಾಡಿದ ವ್ಯಕ್ತಿಗೆ ದೇವರೆ ಶಿಕ್ಷೆ ನೀಡಲಿದ್ದಾನೆ ಎಂದು ಕಿಡಿಕಾರಿದ ಅವರು, 1993ರಲ್ಲೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ತೊಣ್ಣೂರು ಕೆರೆಗೆ ಕರೆತಂದು ಕೆರೆ ಅಭಿವೃದ್ಧಿಗೆ ವಿಶೇಷ ಅನುದಾನ ಕೊಡಿಸಿದ್ದೆ. ನಂತರವೂ ತೊಣ್ಣೂರು ಕೆರೆಯಿಂದ ಸಮೀಪದ ಗ್ರಾಮಗಳಿಗೆ ಕುಡಿಯುವ ನೀರು ಕೊಡಲು ಮುಂದಾದಾಗ ಆಗಲೂ ಅಪಪ್ರಚಾರ ನಡೆಸಿದರು. ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು. ಇದರಿಂದ ತಾಲೂಕಿನ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದರು.

ಈ ವೇಳೆ ಎಸಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ, ಮಾಜಿ ಜಿಪಂ ಸದಸ್ಯೆ ನಾಗಮ್ಮ ಪುಟ್ಟರಾಜು, ಟಿ.ಎಸ್.ಛತ್ರ ಗ್ರಾಪಂ ಅಧ್ಯಕ್ಷೆ ಭಾರತಿ, ಮಾಜಿ ಅಧ್ಯಕ್ಷೆ ಶ್ರುತಿ, ಪೂಜಾ, ಎಇಇ ಪುಟ್ಟಮಾಯಿಗೌಡ, ಎಇ ಗಣೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಪ್ರಿಯದರ್ಶಿನಿ, ತಾಪಂ ಇಒ ಎಸ್.ಎಂ.ಲೋಕೇಶ್ ಮೂರ್ತಿ, ಬಿಇಒ ಲೋಕೇಶ್, ತಾಪಂ ಮಾಜಿ ಸದಸ್ಯ ರಾಜಣ್ಣ, ಮುಖಂಡರಾದ ಪ್ರಭಾಕರ್, ಭಾಸ್ಕರ್, ಬಲರಾವ್ ಸೇರಿದಂತೆ ಹಲವರಿದ್ದರು.

ಚಲುವರಾಯಸ್ವಾಮಿಗೆ ರಾಜಕೀಯ ಶಕ್ತಿ ನೀಡಿದ್ದು ಜೆಡಿಎಸ್

ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಿ: ಮಹಾಲಿಂಗೇಗೌಡ



ಮಂಡ್ಯ, ನ.25– ಮಾಜಿ ಸಚಿವ ಚಲುವರಾಯಸ್ವಾಮಿಗೆ ರಾಜಕೀಯವಾಗಿ ಶಕ್ತಿ ನೀಡಿದ ಪಕ್ಷ ಜೆಡಿಎಸ್ ಎಂಬುದನ್ನು ಅವರು ಮರೆಯಬಾರದು. ಅವರು ಇಷ್ಟು ಎತ್ತರಕ್ಕೆ ಬೆಳೆಯಲು ಯಾವ ಪಕ್ಷ ಕಾರಣ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಜೆಡಿಎಸ್ ಜಿಲ್ಲಾ ವಕ್ತಾರ ಮಹಾಲಿಂಗೇಗೌಡ ಮುದ್ದನಘಟ್ಟ ತಿಳಿಸಿದರು.

ಜಿಲ್ಲೆ ಅಭಿವೃದ್ಧಿಗೆ ಜೆಡಿಎಸ್ ಕೊಡುಗೆ ಏನು ಎಂದು ಚಲುವರಾಯಸ್ವಾಮಿ ಕೇಳುತ್ತಾರೆ. ಹೆಚ್.ಡಿ.ಕುಮಾರಸ್ವಾಮಿ ಮೊದಲ ಬಾರಿ 20 ತಿಂಗಳು ಸಿಎಂ ಆಗಿದ್ದಾಗ ನೀವು ಉಸ್ತುವಾರಿ ಸಚಿವರಾಗಿ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸ ಮಾಡಲಿಲ್ಲವೇ, ಇದು ಯಾವ ಪಕ್ಷದ ಕೊಡುಗೆ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಮೈಷುಗರ್ ಕಾರ್ಖಾನೆ ಹೆಚ್.ಡಿ.ಕುಮಾರಸ್ವಾಮಿ ಅವರ ಕಾಲದಲ್ಲಿ ಸ್ಥಗಿತಗೊಂಡಿತ್ತು ಎಂದು ಹೇಳುತ್ತೀರಿ. ಮೈಶುಗರ್ ಕಾರ್ಖಾನೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಬಜೆಟ್‌ನಲ್ಲಿ 400 ಕೋಟಿ ಘೋಷಣೆ ಮಾಡಿ, 100 ಕೋಟಿಯನ್ನು ನೀಡಿರಲಿಲ್ಲವೇ, ಇದು ನಿಮಗೆ ತಿಳಿದಿಲ್ಲವೇ ಎಂದರು.

ಅನೇಕ ರೈತಾಪಿ ಜನಪರ ಯೋಜನೆಗಳನ್ನು ರೂಪಿಸುತ್ತಿರುವಾಗಲೇ ಕಾಂಗ್ರೆಸ್ ನಾಯಕರ ಒಳ ಸಂಚಿನಿಂದ ಆಪರೇಷನ್ ಕಮಲದ ಬಿಜೆಪಿ ಸರ್ಕಾರ ಬರಲು ಯಾರು ಕಾರಣ ಎಂಬುದು ನಿಮಗೆ ಗೊತ್ತಿಲ್ಲವೇ ಎಂದು ಹರಿಹಾಯ್ದರು. ನೀರಾವರಿ, ಲೋಕೋಪಯೋಗಿ, ಹಣಕಾಸು, ಇಂಧನ ಖಾತೆಗಳು ಅವರ ಕುಟುಂಬದ ಪಾಲಾಗುತ್ತವೆ ಎನ್ನುತ್ತಿದ್ದೀರಿ, 20 ತಿಂಗಳ ಅಧಿಕಾರವಧಿಯಲ್ಲಿ ನೀವು ಇರಲಿಲ್ಲವೇ, ಕೇಳಬೇಕಿತ್ತು ಎಂದರು.

ಇಡೀ ರಾಜ್ಯದಲ್ಲಿ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದ ರಾಜಕಾರಣಿ ಯಾರಾದರೂ ಇದ್ದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತ್ರ. ಅಂತಹವರು ನೀರಾವರಿ ಮಂತ್ರಿ ಆಗಬಾರದೆ ಎಂದು ತಿರುಗೇಟು ನೀಡಿದರು.

ಕುಮಾರಸ್ವಾಮಿ ಕೊಟ್ಟ ಮಾತಿಗೆ ಯಾವತ್ತು ತಪ್ಪಿಲ್ಲ. ಪೂರ್ಣ ಪ್ರಮಾಣದ ಬಹುಮತ ಬಂದರೆ ದಲಿತರನ್ನು ಡಿಸಿಎಂ ಮಾಡೇ ಮಾಡುತ್ತಾರೆ. ಸಮ್ಮಿಶ್ರ ಸರ್ಕಾರದಲ್ಲಿ ಡಾ.ಜಿ.ಪರಮೇಶ್ವರ್‌ಗೆ ಡಿಸಿಎಂ ಹುದ್ದೆ ಕೊಟ್ಟಿರಲಿಲ್ಲವೇ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರದು ಮಾತೃ ಹೃದಯ. ದೀನ ದಲಿತ, ಬಡವರ, ಶೋಷಿತರ, ಅಲ್ಪಸಂಖ್ಯಾತರ, ನೊಂದವರ ರೈತರ ಕಷ್ಟಕ್ಕೆ ಕಣ್ಣೀರು ಹಾಕುತ್ತಾರೆಯೇ ಹೊರತು ಮೊಸಳೆ ಕಣ್ಣೀರು ಹಾಕುವ ನಾಯಕರಲ್ಲ ಎಂದರು.

ಪಂಚರತ್ನ ಯಾತ್ರೆಗೆ ಅಭೂತಪೂರ್ವ ಬೆಂಬಲ: ಮುಳಬಾಗಿಲಿನಲ್ಲಿ ಚಾಲನೆ ನೀಡಿರುವ ಪಂಚರತ್ನ ರಥಯಾತ್ರೆಗೆ ಎಲ್ಲೆಡೆ ಅಭೂತ ಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ. 2023ರ ವಿಧಾನಸಭಾ ಚುನಾವಣೆ ಫಲಿತಾಂಶದಲ್ಲಿ ಎಲ್ಲವೂ ತಿಳಿಯಲಿದೆ ಎಂದರು.

2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಸಂಪೂರ್ಣ ಬಹುಮತದೊಂದಿಗೆ ಮಿಷನ್ 123 ಯಶಸ್ವಿಯಾಗಿ ಕುಮಾರಸ್ವಾಮಿ ಅವರು ಈ ರಾಜ್ಯದ ಸಿಎಂ ಆಗುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡರಾದ ವೆಂಕಟೇಶಣ್ಣ ಅನಿಲ್ ಕುಮಾರ್, ಸುನಿಲ್ ಕುಮಾರ್, ವಿಶ್ವನಾಥ್, ಪ್ರಮೋದ್ ಹಾಜರಿದ್ದರು.

ಕೃಷಿ ಸಂಶೋಧನಾ ಕೇಂದ್ರದಲ್ಲಿ ಡಿ.2ರಿಂದ ಕೃಷಿ ಮೇಳ

ಮಂಡ್ಯ, ನ.25– ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಡಿ.2 ಮತ್ತು 3ರಂದು ಕೃಷಿ ಮೇಳ ಆಯೋಜಿಸಲಾಗಿದ್ದು, ಮೇಳದಲ್ಲಿ ರೈತರಿಗೆ ಭತ್ತ, ರಾಗಿ, ಕಬ್ಬು, ಮುಸುಕಿನ ಜೋಳ, ಮೇವಿನ ಬೆಳೆ, ತೋಟಗಾರಿಕೆ, ಒಳನಾಡು ಮೀನುಗಾರಿಕೆ ಇತ್ಯಾದಿಗಳ ಸುಧಾರಿತ ಬೇಸಾಯದ ಬಗ್ಗೆ ಕ್ಷೇತ್ರ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದೆ.

ಮಹಾರಾಷ್ಟ್ರ ಸಿಎಂರಿಂದ ಗಡಿಕ್ಯಾತೆ; ಕನ್ನಡಪರ ಸಂಘಟನೆಗಳ ಆಕ್ರೋಶ

ಚಾ.ನಗರದಲ್ಲಿ ಕರ್ನಾಟಕ ಸೇನಾಪಡೆ ಪ್ರತಿಭಟನೆ



ಚಾಮರಾಜನಗರ, ನ.25– ಕರ್ನಾಟಕದ ಬೆಳಗಾವಿ, ನಿಪ್ಪಾಣಿ, ಕಾರವಾರ ಸೇರಿದಂತೆ ಹಲವು ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ಹೇಳಿಕೆ ನೀಡಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಹೇಳಿಕೆ ಖಂಡಿಸಿ ನಗರದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಸಿತು.

ನಗರದ ಚಾಮರಾಜೇಶ್ವರ ದೇವಾಲಯದ ಆವರಣದಿಂದ ಮೆರವಣಿಗೆಯಲ್ಲಿ ತೆರಳಿದ ಕಾರ್ಯಕರ್ತರು 'ಮಹಾರಾಷ್ಟ್ರಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಭಾವಚಿತ್ರ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಮಹಾರಾಷ್ಟ್ರ ಸರಕಾರ ಪದೇ–ಪದೇ ಗಡಿಕ್ಯಾತೆ ತೆಗೆಯುತ್ತಲೇ ಬಂದಿದ್ದು, ವಿಪರ್ಯಾಸದ ಸಂಗತಿ, ಕಳೆದ ಎರಡು ಮೂರು ದಿನಗಳಿಂದ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಕರ್ನಾಟಕದ ಬೆಳಗಾವಿ, ನಿಪ್ಪಾಣಿ, ಕಾರವಾರ ಕರ್ನಾಟಕಕ್ಕೆ ಸೇರ್ಪಡೆ ಮಾಡಿಯೇ ತೀರುತ್ತೇವೆ ಎಂದು ಉದ್ದಟತನದ ಹೇಳಿಕೆ ನೀಡುವ ಮೂಲಕ ರಾಜ್ಯ–ರಾಜ್ಯಗಳ ನಡುವೆ ಸಂಘರ್ಷವನ್ನು ಹುಟ್ಟುಹಾಕುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮಹಾಜನ್ ವರದಿ ಪ್ರಕಾರ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಅದು ಎಂದೋ ಮುಗಿದ ಅಧ್ಯಾಯವಾಗಿದೆ. ಕರ್ನಾಟಕದ ಸೊಲ್ಲಾಪುರ, ಸಾಂಗ್ಲಿ ಸೇರಿದಂತೆ ಇತರೇ ಅಚ್ಚ ಕನ್ನಡ ಮಾತಾಡುವ ಪ್ರದೇಶಗಳು ಮಹಾರಾಷ್ಟ್ರದಲ್ಲಿವೆ, ಇವರ ಹಾಗೇ ನಾವು ನಮ್ಮ ಪ್ರದೇಶಗಳನ್ನು ಬಿಟ್ಟುಕೊಡಿ ಎಂಬ ಹೇಳಿಕೆ ನೀಡಬಹುದಿತ್ತಲ್ಲ ಎಂದರು.

ಮಹಾರಾಷ್ಟ್ರ ಸರಕಾರ ಗಡಿಕ್ಯಾತೆ ತೆಗೆಯುತ್ತಿದ್ದರೂ, ರಾಜ್ಯದ 28 ಸಂಸದರು ಮೌನವಹಿಸಿದ್ದಾರೆ. ಪ್ರಧಾನಿಯವರು ಕೂಡಾ, ಇದರ ಬಗ್ಗೆ ಚಕಾರವೆತ್ತದೇ, ಸುಮ್ಮನಿದ್ದಾರೆ. ಕೂಡಲೇ ಮಹಾರಾಷ್ಟ್ರ ಸರಕಾರ ಕರ್ನಾಟಕದ ಪ್ರದೇಶಗಳನ್ನು ಸೇರ್ಪಡೆ ಮಾಡಿಕೊಳ್ಳುವ ವಿಚಾರದಿಂದ ಹಿಂದೆ ಸರಿಯಬೇಕು, ಇಲ್ಲದಿದ್ದಲ್ಲಿ ರಾಜ್ಯಾದ್ಯಂತ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು ಹಂತಹಂತದ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ಸೇನಾಪಡೆ ರಾಜ್ಯ ಪ್ರಧಾನ ಕಾರ್ಯದರ್ಶಿ ಚಾ.ವೆಂ.ರಾಜಗೋಪಾಲ್, ಗೌರವಾಧ್ಯಕ್ಷ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಕರ್ನಾಟಕ ಗಡಿನಾಡು ವೇದಿಕೆ ಅಧ್ಯಕ್ಷ ಚಾ.ರಾ.ಕುಮಾರ್, ಪಣ್ಯದಹುಂಡಿ ರಾಜು, ಮರಿಯಾಲದಹುಂಡಿ ಕುಮಾರ್, ಸಾಗರ್ ರಾವತ್, ಚಾ.ಸಿ.ಸಿದ್ದರಾಜು, ದೊರೆ, ವರದನಾಯಕ, ನಂಜುಂಡಸ್ವಾಮಿ, ಆಟೋ ಮಹದೇವಸ್ವಾಮಿ, ಹೆಗ್ಗೋಠಾರ ಮಹದೇವಸ್ವಾಮಿ ಇತರರು ಭಾಗವಹಿಸಿದ್ದರು.

ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಮಹನೀಯರ ಸ್ಮರಣೆ ನಮ್ಮ ಕರ್ತವ್ಯ

ಪುಣಜನೂರು ಚೆಕ್ ಪೋಸ್ಟ್‌ನಲ್ಲಿ ಕನ್ನಡ ರಾಜ್ಯೋತ್ಸವ



ಚಾಮರಾಜನಗರ ನ.25– ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದರು

ತಾಲೂಕಿನ ಪುಣಜನೂರು ಚೆಕ್ ಪೋಸ್ಟ್‌ನಲ್ಲಿ ಪುಣಜನೂರು ಗ್ರಾಮಸ್ಥರು ಹಾಗೂ ಯುವಕರ ಬಳಗದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ದೇಶದ ಯಾವುದೇ ಮೂಲೆಯಲ್ಲಿ ಕನ್ನಡಕ್ಕೆ ಧಕ್ಕೆಯಾದರೆ ಮೊಟ್ಟ ಮೊದಲು ಹೋರಾಟ ಶುರುವಾಗುವುದು ಜಿಲ್ಲೆಯಲ್ಲೇ. ಕರ್ನಾಟಕ ಸಂಘಟನೆಗಳ ಹೋರಾಟದ ಫಲವಾಗಿ ಗಡಿ ಜಿಲ್ಲೆಯಲ್ಲಿ ಕನ್ನಡ ಪ್ರೇಮ ಹೆಚ್ಚಾಗಿದ್ದು, ಕನ್ನಡ ಶಕ್ತಿಯುತವಾಗಿದೆ. ಕನ್ನಡ ನಾಡು, ನುಡಿ, ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದರು.

ಇಂಗ್ಲೀಷ್ ಸೇರಿದಂತೆ ಇತರ ಭಾಷೆಗಳ ಕಲಿಯುವುದರ ಜತೆಗೆ ನಮ್ಮ ಮಾತೃಭಾಷೆಯಾದ ಕನ್ನಡಕ್ಕೆ ವಿಶೇಷವಾಗಿ ಒತ್ತುಕೊಟ್ಟು ಕಲಿಯುವ ಮೂಲಕ ಕನ್ನಡವನ್ನು ಉಳಿಸಿ–ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗರ ಕೆಲಸ ಆಗಬೇಕು. ಗಡಿಭಾಗವಾದ ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡುವ ಕನ್ನಡ ಕಂಪನ್ನು ಪಸರಿಸುವ ಕೆಲಸ ಅಗುತ್ತಿರುವುದು ತುಂಬಾ ಸಂತಸ ತಂದಿದೆ. ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಿಗೆ ಸೀಮಿತವಾಗದೇ ನಿತ್ಯೋತ್ಸವ ಆಗಬೇಕಿದೆ ಎಂದರು.

ಧ್ವಜಾರೋಹಣ ನೆರವೇರಿಸಿದ ಪರಿಸರವಾದಿ ಪುಣಜನೂರು ದೊರೆಸ್ವಾಮಿ ಮಾತನಾಡಿ, ಕನ್ನಡ ನೆಲ, ಜಲ, ಭಾಷೆ ಗಡಿ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಕನ್ನಡಕ್ಕಾಗಿ ಸಾಹಿತಿಗಳು ಬರಹಗಾರರು ಹೋರಾಟ ಮಾಡಿದ್ದಾರೆ. ರಾಜ್ಯದಲ್ಲಿ ಆಡಳಿತ ನಡೆಸಿದ ಸರ್ಕಾರಗಳು ಗಡಿ ಗುರುತಿಸುವ ಕೆಲಸ ಮಾಡುತ್ತಿಲ್ಲ. ಅರಣ್ಯ ಪ್ರದೇಶ ಗ್ರಾಮದಿಂದ ಕೂಡಿರುವ ಪುಣಜನೂರಿನಲ್ಲಿ ದಲಿತರ ಕಾಲೋನಿ, ಗಿರಿಜನರ ಕಾಲೋನಿ, ಲಂಬಾಣಿ ಕಾಲೋನಿ ಮಾಡಿಲ್ಲ. ಕಾನೂನು ತೊಡಕು ಬಹಳಷ್ಟು ಇದೆ. ತಮಿಳಲರು ಕನ್ನಡದ ಬಗ್ಗೆ ಅವಹೇಳನ ಮಾಡುವುದು ನಡೆಯುತ್ತಿದೆ. ಅದರ ವಿರುದ್ಧ ಮುಂದಿನ ದಿನಗಳಲ್ಲಿ ಹೋರಾಟ ಗ್ರಾಮದ ಯುವಕರು ಮಾಡಬೇಕಾಗುತ್ತದೆ. ಇಲ್ಲಿ ಕನ್ನಡ ಕಂಪನ್ನು ಸೂಸುವ ಕೆಲಸಗಳು ಹೆಚ್ಚು ಆಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಗ್ರಾಪಂ ಉಪಾಧ್ಯಕ್ಷ ಗೀತಾ ಸಿದ್ದರಾಜು, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮುತ್ತುನಾಯಕ್, ನಿರ್ದೇಶಕರಾದ ಪಿ.ಕುಮಾರ್ ನಾಯಕ್, ಗುರುನಾಯಕ್, ಯ.ನಾಗನಾಯಕ್, ವಲಯ ಅರಣ್ಯಾಧಿಕಾರಿ ನಿಸಾರ್ ಅಹಮದ್, ಮುನಿಯಪ್ಪ, ಗ್ರಾಪಂ ಸದಸ್ಯ ನಾಗನಾಯಕ, ಚಂದ್ರಶೇಖರ್, ರಾಚಪ್ಪಾಜಿ, ಪೋಲೀಸ್ ರಂಗೇಗೌಡ, ಮಹೇಂದ್ರ, ನಾಗನಾಯಕ, ಬಂಗಾರಶೆಟ್ಟಿ, ನಾಗರಾಜು, ಗ್ರಾಪಂ ಕಾರ್ಯದರ್ಶಿ ನಾಗನಾಯಕ ಮುಖ್ಯ ಶಿಕ್ಷಕ ಪ್ರದೀಶ್, ಜಾಕಿರ್, ಸುರೇಶ್, ರಾಜೇಶ್, ಸಣ್ಣಕ್ಕಿಗೌಡ್ರು ರಂಗಸ್ವಾಮಿನಾಯಕ, ಸಿದ್ದರಾಜು, ಯುಜಿ.ಲೋಕೇಶ್ ಹಾಗೂ ಗ್ರಾಮಸ್ಥರು ಹಾಜರಿದ್ದರು. ಗ್ರಂಥಾಲಯ ಇಲಾಖೆಯ ವೆಂಕಟೇಶ್ ಸ್ವಾಗತಿಸಿ, ವಂದಿಸಿದರು.


ನಾಳೆಯಿಂದ ಜಿಲ್ಲೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.25– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಚಾಮರಾಜನಗರ, ಹರದನಹಳ್ಳಿ ಮತ್ತು ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನ.27 ಮತ್ತು 28ರಂದು ಹಮ್ಮಿಕೊಂಡಿರುವುದರಿಂದ ಆಯಾ ದಿನದಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನ.27ರಂದು ದೊಡ್ಡರಾಯಪೇಟೆ ವ್ಯಾಪ್ತಿಯ ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ ಟೌನ್–2, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ ಮತ್ತು ಅಟ್ಟುಗೂಳಿಪುರ ವ್ಯಾಪ್ತಿಯ ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೊನ್ನಳ್ಳಿ ವ್ಯಾಪ್ತಿಯ ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಪುಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಮತ್ತು ಅರಕಲವಾಡಿ ವ್ಯಾಪ್ತಿಯ ಕಿಲಿಗೆರೆ, ಮಾದಲವಾಡಿ, ಯನಗುಂಬ, ಯರಗನಹಳ್ಳಿ, ಅಜ್ಜಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ನವೆಂಬರ್ 28ರಂದು ಹರವೆ ವ್ಯಾಪ್ತಿಯ ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ನಂಜದೇವನಪುರ, ಕಲ್ಪುರ, ದೇವಲಾಪುರ, ತಮ್ಮಡಹಳ್ಳಿ, ಎನ್.ಜೆ.ವೈ ಮತ್ತು ಕಬ್ಬಳ್ಳಿ ವ್ಯಾಪ್ತಿಯ ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬೆಳಚಲವಾಡಿ, ನಿಟ್ರೆ, ಅಗತಗೌಡನಹಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಸಂಪರ್ಕಿಸುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರೇಂದ್ರ ನಿಧನ



ಯಳಂದೂರು, ನ.25– ಪಟ್ಟಣದ ಕಾವೇರಿಯ ಬೇಕರಿಯ ಮಾಲೀಕ ಹಾಗೂ ಲಯನ್ಸ್ ಸಂಸ್ಥೆಯ ಸದಸ್ಯ ಸುರೇಂದ್ರ (60) ಗುರುವಾರ ಮಧ್ಯ ರಾತ್ರಿ ಹೃದಯಾಘಾತದಿಂದ ತಮ್ಮ ಮನೆಯಲ್ಲೇ ನಿಧನರಾದರು. ಮೃತರಿಗೆ ಪತ್ನಿ ಗೀತಾ ಸೇರಿದಂತೆ ಒಬ್ಬ ಪುತ್ರ ಹಾಗೂ ಒಬ್ಬ ಪುತ್ರಿ ಇದ್ದಾರೆ. ಅಂತ್ಯಕ್ರಿಯೆಯು ಶುಕ್ರವಾರ ಕೇರಳದ ಕಣ್ಣೂರು ಜಿಲ್ಲೆಯ ಇವರ ಸ್ವಗ್ರಾಮ ಮನ್ನಂದರಾದಲ್ಲಿ ಶುಕ್ರವಾರ ನೆರವೇರಿತು. ಮೃತರ ನಿಧನಕ್ಕೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ–570 004, ಕೆ.ಆರ್.ಮೊಹಲ್ಲಾ, 5ನೇ ಅಡ್ಡ ರಸ್ತೆ, ತ್ಯಾಗರಾಜ ರಸ್ತೆ, ಮನೆ ನಂ. 85/86ರಲ್ಲಿ ವಾಸವಾಗಿರುವ ಶ್ರೀ ಕಮಲೇಶ್ವರ ಬಾಬುರವರ ಮಗಳು ಹಾಗೂ ಶ್ರೀ ಜೆ.ಬಿ.ನಟರಾಜ್‌ರವರ ಧರ್ಮಪತ್ನಿ ಶ್ರೀಮತಿ ಜೆ.ಎನ್.ಶೃತಿ (ಷೆಡ್ಯೂಲ್ ಐಟಂ ನಂ.1ರ ಸ್ವತ್ತಿನ ಮಾಲೀಕರು) ಹಾಗೂ ಲೇಟ್ ಜೆ.ಭೀಮಾನಂದ ಗುಪ್ತರವರ ಮಗನಾದ ಶ್ರೀ ಜೆ.ಬಿ.ಪಟ್ಟಾಭಿ (ಷೆಡ್ಯೂಲ್ ಐಟಂ ನಂ.2ರ ಸ್ವತ್ತಿನ ಮಾಲೀಕರು)ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಗಲ್ಲದೆ ಬೇರೆ ಯಾರಿಗಾದರೂ, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಐಟಂ ನಂ.1:–

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಮೈಸೂರು ಜಿಲ್ಲಾಧಿಕಾರಿಗಳಿಂದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡ [Deemed conversion / alienation order bearing no. 326649, dated 30-04-2022] ಸರ್ವೆ ನಂ. 9/6, ವಿಸ್ತೀರ್ಣ 0–36 ಗುಂಟೆ ಸ್ವತ್ತು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 9/3, ಪಶ್ಚಿಮಕ್ಕೆ: ಸರ್ವೆ ನಂ.8, ಉತ್ತರಕ್ಕೆ: ಸರ್ವೆ ನಂ. 9/7 ಮತ್ತು ದಕ್ಷಿಣಕ್ಕೆ: ಸರ್ವೆ ನಂ. 9/1.

ಐಟಂ ನಂ.2:–

(a) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಮೈಸೂರು ಜಿಲ್ಲಾಧಿಕಾರಿಗಳಿಂದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡ [Deemed conversion / alienation order bearing no. 326653, dated 30-04-2022] ಸರ್ವೆ ನಂ. 9/7, ವಿಸ್ತೀರ್ಣ 1 ಎಕರೆ 31 ಗುಂಟೆ ಸ್ವತ್ತು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 9/3, ಪಶ್ಚಿಮಕ್ಕೆ: ಸರ್ವೆ ನಂ. 8, ಉತ್ತರಕ್ಕೆ: ಸರ್ವೆ ನಂ. 20 ಮತ್ತು ದಕ್ಷಿಣಕ್ಕೆ: ಸರ್ವೆ ನಂ. 9/6.

(b) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಖಾತಾ ನಂ. 451 ನ್ನು ಹೊಂದಿರುವ ಸರ್ವೆ ನಂ. 20/1, ವಿಸ್ತೀರ್ಣ 1 ಎಕರೆ 27 ಗುಂಟೆ, ಆಕಾರ ರೂ. 1.63 ನ್ನು ಹೊಂದಿರುವ ಖುಷ್ಕಿ ಜಮೀನು ಮತ್ತು ಈ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಶ್ರೀ ಮೋರಿಲಿಂಗಯ್ಯ ಮತ್ತು ಶ್ರೀ ಪುಟ್ಟಯ್ಯರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 20/5ರ ಜಮೀನು. ಉತ್ತರಕ್ಕೆ: ಶ್ರೀ ಸುಬ್ಬರಾಯಪ್ಪರವರಿಗೆ ಸೇರಿದ ಜಮೀನು. ದಕ್ಷಿಣಕ್ಕೆ: ಸರ್ವೆ ನಂ. 9/1ರ ಜಮೀನು.

(c) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಖಾತಾ ನಂ. 451 ನ್ನು ಹೊಂದಿರುವ ಸರ್ವೆ ನಂ. 20/5, ವಿಸ್ತೀರ್ಣ 2 ಎಕರೆ 31 ಗುಂಟೆ, ಆಕಾರ ರೂ. 2.70 ನ್ನು ಹೊಂದಿರುವ ಖುಷ್ಕಿ ಜಮೀನು ಮತ್ತು ಈ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 20/1ರ ಜಮೀನು. ಪಶ್ಚಿಮಕ್ಕೆ: ಸರ್ಕಾರಿ ರಸ್ತೆ, ಉತ್ತರಕ್ಕೆ: ಶ್ರೀ ಸುಬ್ಬರಾಯಪ್ಪರವರಿಗೆ ಸೇರಿದ ಜಮೀನು. ದಕ್ಷಿಣಕ್ಕೆ: ಶ್ರೀ ಮಾದಪ್ಪ ಮತ್ತು ಶ್ರೀಮತಿ ಶಿವಲಿಂಗಮ್ಮರವರಿಗೆ ಸೇರಿದ ಜಮೀನು.

ಸಹಿ/– **ಕೆ.ಎನ್.ಮಹಾದೇವಸ್ವಾಮಿ,**
ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು–570 004, Mob No. : 94482-22522, Office No.: 0821-4287998.

11ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 11 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಹಸಿರಾಗಿದ್ದೀರಿ.
ದು:ಖತಪ್ತರು: ಪತ್ನಿ ಹೆಚ್.ಎಸ್.ಶಾಂತಿ, ಮಕ್ಕಳು ಅರುಣ್ ಕುಮಾರ್, ದಿವ್ಯ, ದೀಪಿಕ. ಅಳಿಯಂದಿರು ಮಹೇಶ್ ಮತ್ತು ವಿನೋದ್, ಸೊಸೆ ಗಾಯಿತ್ರಿ ಹಾಗೂ ಕುಟುಂಬಸ್ಥರು.

ಹೆಚ್.ಎಸ್.ಕುಮಾರ

ಹಸಿರು ನಮ್ಮ ಉಸಿರು

ಕೈಲಾಸ ಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀಮಾನ್ ಬಸಪ್ಪನವರು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದಲ್ಲಿ ವಾಸವಾಗಿರುವ ದಿ|| ಗಣಪತ್ತಪ್ಪನವರ ಕುಟುಂಬ ಶ್ರೀ ಬಸಪ್ಪನವರ ಧರ್ಮಪತ್ನಿ ಶ್ರೀಮತಿ ಗೌರಮ್ಮನವರು ಮಾಡುವ ಶರಣು ಶರಣಾರ್ಥಿಗಳು.

ದಿನಾಂಕ : 17/11/2022ನೇ ಭಾನುವಾರ ನನ್ನ ಪೂಜ್ಯ ಪತಿಯವರಾದ ಶ್ರೀಮಾನ್ ಬಸಪ್ಪನವರು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧ ಲಿಂಗೈಕ್ಯರ ಶಿವಗಣಾರಾಧನಾ ಕಾರ್ಯವನ್ನು ದಿನಾಂಕ: 27/11/2022ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಮೈಸೂರಿನ ಶ್ರೀ ಕುದೇರು ದಾಸೋಹ ಮಠದ, ಶ್ರೀ ಕಿರಿಯಸ್ವಾಮಿಗಳವರಾದ ಷ|| ಬ್ರ|| ಸ್ವ|| ಶ್ರೀ ಇಮ್ಮಡಿಗುರುಲಿಂಗಸ್ವಾಮಿಗಳವರ ದಿವ್ಯಪಾದಪೂಜೆಯನ್ನು ಹಾಗೂ ಹರಗುರುಚರಮೂರ್ತಿಗಳವರ ದಿವ್ಯ ಸಮ್ಮುಖದಲ್ಲಿ ಮಧ್ಯಾಹ್ನ 12 ಘಂಟೆಗೆ ಶಿವಗಣಾರಾಧನಾ ಕಾರ್ಯವನ್ನು ದಾರಿಪುರ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಬಯಸಬೇಕಾಗಿ ಪ್ರಾರ್ಥಿಸುತ್ತೇವೆ.

ಇಂತಿ ದು:ಖತಪ್ತರು
ಶ್ರೀಮತಿ ಗೌರಮ್ಮನವರು ಹಾಗೂ ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧು–ವರ್ಗದವರು ಮತ್ತು ದಾರಿಪುರ ಗ್ರಾಮಸ್ಥರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಹೆಚ್.ಡಿ.ಕೋಟೆ. ಮೈಸೂರು ಜಿಲ್ಲೆ.
.hdkotetown.mrc.gov.in Email id: itstaff_ulb_hdkote@yahoo.com55307
ಸಂ: ಹೆದೆಕೋ:ಆಶಾ: ಮು.ಆ:ನಗರೋಥಾನ–04_ಉಪಹಾರ:ಸಿಆರ್–23 /2022–23 ದಿ: 15.11.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)


ಕೆಟಿಪಿಪಿ 2000ರ ನಿಯಮದನ್ವಯ ಹೆಚ್.ಡಿ.ಕೋಟೆ ಪುರಸಭೆಯ ಸ್ವಚ್ಛತಾ ವಿಭಾಗದ ಪೌರಕಾರ್ಮಿಕರು ಹಾಗು ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ http://eproc.karnataka.nic.in ನಿಂದ ಟೆಂಡರ್ ಷರತ್ತು ಹಾಗೂ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರಗಳಿಗೆ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು.
ಕ್ರ.ಸಂ 01 ಇಂಡೆಂಟ್ ನಂ: HDK/TMC/PK/FOOD/02/2022-23 ಅಂದಾಜು ಮೊತ್ತ (ಲಕ್ಷಗಳಲ್ಲಿ): 5.0
ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 09.12.2022ರ ಸಂಜೆ 5.30 ಗಂಟೆ ಹಾಗು ಟೆಂಡರ್‌ನ್ನು ತೆರೆಯುವ ದಿನಾಂಕ : 12.12.2022 ರ ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.

ಸಹಿ/– ಅಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಉಪಾಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಮುಖ್ಯಾಧಿಕಾರಿ ಪುರಸಭೆ, ಹೆಚ್.ಡಿ.ಕೋಟೆ

DIPR/DDMYS/MCA/710/2022-23









ಮೈಸೂರಿನ ಹೆಚ್.ಡಿ.ದೇವೇಗೌಡ ವೃತ್ತದ ಬಳಿಯಿರುವ ಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್‌ನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸಂಭ್ರಮದಿಂದ ಆಚರಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಅದ್ಧೂರಿ ಹುಟ್ಟುಹಬ್ಬ ಆಚರಣೆ

ರಕ್ತದಾನ ಶಿಬಿರ, ಅಂಧ ಮಕ್ಕಳಿಗೆ ಸಮವಸ್ತ್ರ ವಿತರಣೆ, ಉಪಹಾರ ವ್ಯವಸ್ಥೆ



ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಿಂಜರಾಪೋಲ್ ಹಸುಗಳಿಗೆ ಜಿ.ಟಿ.ದೇವೇಗೌಡರು ಪೂಜೆ ಸಲ್ಲಿಸಿದರು. ಈ ವೇಳೆ ಲಲಿತ ಜಿ.ಟಿ.ದೇವೇಗೌಡ, ಜಿ.ಟಿ.ಹರೀಶ್‌ಗೌಡ ಉಪಸ್ಥಿತರಿದ್ದರು

ಮೈಸೂರು, ನ.25(ಆರ್‌ಕೆಬಿ)–ಚಾಮುಂಡೇಶ್ವರಿ ಕ್ಷೇತ್ರದ ಶಾಸಕ, ಸಹಕಾರಿ ಧುರೀಣ ಜಿ.ಟಿ.ದೇವೇಗೌಡರ 73ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಂಭ್ರಮದಿಂದ ಆಚರಿಸಿದರು.

ಶಾಸಕ ಜಿ.ಟಿ.ದೇವೇಗೌಡರು ಶುಕ್ರವಾರ ಬೆಳಗ್ಗೆ ಪತ್ನಿ ಲಲಿತಾ ದೇವೇಗೌಡ, ಪುತ್ರ ಜಿ.ಡಿ.ಹರೀಶ್‌ಗೌಡ ಅವರೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು. ವಿಶೇಷ ಪೂಜೆ, ಅರ್ಚನೆ ನೆರವೇರಿಸಿದ ಅರ್ಚಕರು ಗೌಡರ ಕುಟುಂಬಕ್ಕೆ ಪ್ರಸಾದ ನೀಡಿ, ಶಾಲು ಹೊದಿಸಿ, ಆಶೀರ್ವದಿಸಿದರು. ಬಳಿಕ ದೇವಾಲಯದ ಎದುರು ಈಡುಗಾಯಿ ಒಡೆದರು.

ಚಾಮುಂಡಿಬೆಟ್ಟದಲ್ಲಿ ಕಾರ್ಯಕರ್ತರು ಆಯೋಜಿಸಿದ್ದ ಹುಟ್ಟುಹಬ್ಬದ ಸಮಾರಂಭದಲ್ಲಿ ಭಾಗವಹಿಸಿದ ದೇವೇಗೌಡರು, ಬಳಿಕ ಬನ್ನೂರು ರಿಂಗ್ ರಸ್ತೆಯ ಎಚ್.ಡಿ.ದೇವೇಗೌಡ ಸರ್ಕಲ್ ಬಳಿ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿದರು. ಇದಕ್ಕೂ ಮುನ್ನ ದೇವೇಗೌಡ ವೃತ್ತದಲ್ಲಿ ಬೃಹತ್ ಸೇಬಿನ ಹಾರ ಹಾಕುವ ಮೂಲಕ ನೂರಾರು ಅಭಿಮಾನಿಗಳು ಜಿಟಿಡಿ ಅವರನ್ನು ಸ್ವಾಗತಿಸಿದರು. ಖಾಸಗಿ ಆಸ್ಪತ್ರೆಗಳು 73 ಸ್ವಯಂಸೇವಕರಿಂದ ರಕ್ತ ಪಡೆದವು. ಹಂಚ್ಯಾ ಮತ್ತು ಆಲನಹಳ್ಳಿ ಇನ್ನಿತರ ಗ್ರಾಮಗಳಿಂದ ಆಗಮಿಸಿದ್ದ ಅಭಿಮಾನಿಗಳು ರಕ್ತದಾನ ಮಾಡಿದರು. ಈ ವೇಳೆ ಅಭಿಮಾನಿ ಬಳಗದವರು ಗೌಡರಿಂದಲೇ ಕೇಕ್ ಕತ್ತರಿಸಿ, ತಿನ್ನಿಸುವ ಮೂಲಕ ಸಂಭ್ರಮಿಸಿದರು. ಇದಾದ ಬಳಿಕ ಚಾಮುಂಡಿ ಬೆಟ್ಟದ ತಪ್ಪಲಿನರುವ ಪಿಂಜರಾಪೋಲ್‌ಗೆ ಭೇಟಿ ನೀಡಿ ಗೋಪೂಜೆ ನೆರವೇರಿಸಿದರು.

ಜಿಟಿಡಿ ಹುಟ್ಟುಹಬ್ಬದ ಅಂಗವಾಗಿ ವಿಕಲಚೇತನ ಪುನರ್ವಸತಿ ಕೇಂದ್ರದಲ್ಲಿ ವಿಕಲಚೇತನರಿಗೆ ತ್ರಿಚಕ್ರ ಸೈಕಲ್ ಹಾಗೂ ಊರುಗೋಲುಗಳನ್ನು ಅಭಿಮಾನಿಗಳೂ ವಿತರಿಸಿದರು.

ಬಡ ಮಕ್ಕಳಿಗೆ ಬಟ್ಟೆ ವಿತರಣೆ: ಜಿ.ಟಿ.ದೇವೇಗೌಡ ಅಭಿಮಾನಿ ಬಳಗದ ಕಾರ್ಯಕರ್ತರು ಎರಡು ಅನಾಥಾಲಯದ ಮಕ್ಕಳಿಗೆ ಸಮವಸ್ತ್ರ ನೀಡಿ, ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದರು.



ಜಿಟಿಡಿ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳಾದ ದೂರ ಮಂಜುನಾಥ್, ದಾರಿಪುರ ಡಿ.ಚಂದ್ರಶೇಖರ್, ಉದ್ಬೂರು ಬಸವರಾಜು, ಗೋವಿಂದನಾಯಕ ಇನ್ನಿತರರು ವಿಕಲಚೇತನರಿಗೆ ದ್ವಿಚಕ್ರವಾಹನ ವಿತರಿಸಿದರು.

ಇಲವಾಲದಲ್ಲಿ ಜಿಟಿಡಿ ಅಭಿಮಾನಿಗಳು ಅಂಗವಿಕಲರಿಗೆ ಉಪಾಹಾರದ ವ್ಯವಸ್ಥೆ ಮಾಡಿದರು. ಜಿಟಿಡಿ ಕಟೌಟ್ ಮುಂದೆ ಅಭಿಮಾನಿಗಳು ಜೈಕಾರದ ಘೋಷಣೆಗಳನ್ನು ಕೂಗಿ, ಸಿಹಿ ಹಚಿ ಸಂಭ್ರಮಿಸಿದರು. ಮೈಸೂರು ತಾಲೂಕಿನ ಜಯಪುರ ಗ್ರಾಮದಲ್ಲಿ ಅಭಿಮಾನಿಗಳು ಹುಟ್ಟುಹಬ್ಬ ಆಚರಿಸಿದರು. ಜಿ.ಡಿ.ಹರೀಶ್ ಗೂಪ್ಸ್‌ನ ಯುವಕರು ಮುಖ್ಯರಸ್ತೆಯಲ್ಲಿ ಹುಟ್ಟುಹಬ್ಬ ಆಚರಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ, ಮಸಾಲೆ ಮಜ್ಜಿಗೆ ವಿತರಿಸಿದರು.

ಶುಭಾಶಯಗಳ ಸುರಿಮಳೆ: ವಿಜಯನಗರದಲ್ಲಿರುವ ಜಿ.ಟಿ.ದೇವೇಗೌಡರ ಮನೆಯ ಬಳಿ ಏರ್ಪಡಿಸಿದ್ದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಗಣ್ಯಾತಿಗಣ್ಯರು ಆಗಮಿಸಿ ಹೂಗುಚ್ಛ ನೀಡಿ ಹುಟ್ಟುಹಬ್ಬದ ಶುಭಾಶಯ ಹೇಳಿದರು. ಚಾಮುಂಡಿಬೆಟ್ಟದಿಂದ ಪೂಜೆ ಮುಗಿಸಿ ನೇರವಾಗಿ ವಿಜಯನಗರಕ್ಕೆ ಬರುತ್ತಿದ್ದ ವಿಚಾರ ತಿಳಿದ ಶಾಸಕ ಸಾ.ರಾ.ಮಹೇಶ್ ಅವರು ಜಿ.ಟಿ.ದೇವೇಗೌಡ, ಲಲಿತಾ ಅವರಿಗೆ ಹೂಗುಚ್ಛ ನೀಡಿ ಶುಭಾಶಯ ಕೋರಿದರು. ಮೈಮುಲ್ ಅಧ್ಯಕ್ಷ ಪಿ.ಪ್ರಸನ್ನ, ನಿರ್ದೇಶಕರಾದ ಬಿ.ಎನ್. ಸದಾನಂದ, ಕೆ.ಎಸ್.ಕುಮಾರ್, ಕೆ.ಉಮಾಶಂಕರ್, ಸಿ.ಓಂಪ್ರಕಾಶ್, ನಗರಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ನಮ್ರತಾ ರಮೇಶ್, ರಮಣಿ, ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಸಿ.ಮಹದೇಶ್, ಡಿಸಿಪಿ ಎಂ.ಎಸ್.ಗೀತಾಪ್ರಸನ್ನ, ಚಿಂತಕ ಪ್ರೊ.ಪಿ.ವಿ.ನಂಜರಾಜ ಅರಸು, ವಿಜಯನಗರ ಮಂಜು, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಚಿಕ್ಕಹಳ್ಳಿ ಕುಮಾರ್, ಕೆ.ಎಸ್.ಕುಮಾರ್, ಎಂ.ಬಿ.ಮಂಜೇಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಇನ್ನಿತರರು ಜಿ.ಟಿ.ದೇವೇಗೌಡರಿಗೆ ಶಾಲು ಹೊದಿಸಿ, ಹೂಗುಚ್ಛ ನೀಡಿ ಶುಭ ಕೋರಿದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ದೂರವಾಣಿ ಮೂಲಕ ಕರೆ ಮಾಡಿ ಜಿಟಿಡಿ ಅವರಿಗೆ ಜನ್ಮದಿನದ ಶುಭಾಶಯ ತಿಳಿಸಿದರು.

ಅಭಿಮಾನಿಗಳಿಂದ ಸಂಭ್ರಮ: ಶಾಸಕ ಜಿ.ಟಿ.ದೇವೇಗೌಡರ ಮನೆಯ ಎದುರು ಅಭಿಮಾನಿಗಳು ಬೃಹತ್ ಗಾತ್ರದ ಫ್ಲೆಕ್ಸ್‌ಗಳನ್ನು ಅಳವಡಿಸಿದ್ದರು. ಚಾಮುಂಡೇಶ್ವರಿ ಕ್ಷೇತ್ರದ ದೂರ, ಆನಂದೂರು, ಹಿನಕಲ್, ಇಲವಾಲ, ಕಡಕೊಳ, ಬೆಳವಾಡಿ, ಹೂಟಗಳ್ಳಿ ಸೇರಿದಂತೆ ಇನ್ನಿತರ



ಹೆಚ್.ಡಿ.ದೇವೇಗೌಡ ಸರ್ಕಲ್‌ನಲ್ಲಿ ಜಿಟಿಡಿ ಅವರಿಗೆ ಬೃಹತ್ ಸೇಬಿನ ಹಾರ ಹಾಕಿ ಅಭಿಮಾನಿಗಳು ಸಂಭ್ರಮಿಸಿದರು.

ಗ್ರಾಮಗಳ ಜಿ.ಡಿ.ಹರೀಶ್‌ಗೌಡ ಅಭಿಮಾನಿ ಬಳಗದವರು ಶುಭಾಶಯ ಕೋರಿದರು.

ಜಿ.ಟಿ.ದೇವೇಗೌಡರ ಮೆರವಣಿಗೆ: ಮೈಸೂರು ತಾಲ್ಲೂಕಿನ ಕೆಂಚಲಗೂಡು ಗ್ರಾಮದ ನವಚೇತನ ವಿಶೇಷ ಚೇತನ ಮಕ್ಕಳ ವಸತಿ ನಿಲಯಕ್ಕೆ ತೆರಳಿ ಮಕ್ಕಳೊಂದಿಗೆ ಕೇಕ್ ಕತ್ತರಿಸಿದ ದೇವೇಗೌಡರು, ಈ ವೇಳೆ ಅಭಿಮಾನಿಗಳು ನೀಡಿದ್ದ ದಿನಸಿ ಪದಾರ್ಥಗಳನ್ನು ನಿಲಯದ ಮೇಲ್ವಿಚಾರಕರಿಗೆ ವಿತರಿಸಿದರು. ಮಾವಿನಹಳ್ಳಿ ಗ್ರಾಮದಲ್ಲಿ ತಳಿರು ತೋರಣಗಳಿಂದ ಸಿಂಗರಿಸಿ, ತೆರೆದ ವಾಹನದಲ್ಲಿ ಜಿ.ಟಿ.ದೇವೇಗೌಡರ ಮೆರವಣಿಗೆ ಮಾಡಲಾಯಿತು. ಗ್ರಾಮದ ಮುಖಂಡರು, ಅಭಿಮಾನಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 73 ಕೆಜಿ ತೂಕದ ಕೇಕ್ ಕತ್ತರಿಸಿದರು. ನಂತರ ಬರಡನಪುರ ಗ್ರಾಮದ ಮಹಾಂತೇಶ್ವರಸ್ವಾಮಿ ಮಠಕ್ಕೆ ತೆರಳಿ ಸ್ವಾಮೀಜಿ ಆಶೀರ್ವಾದ ಮಾಡಿದರು. ನಂತರ, ಹೂಟಗಳ್ಳಿ ಗ್ರಾಮದಲ್ಲಿ ಅಭಿಮಾನಿಗಳು ಆಯೋಜಿಸಿದ್ದ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಕೇಕ್ ಕತ್ತರಿಸಿದರು. ಈ ವೇಳೆ ನೂರಾರು ಮಂದಿಗೆ ಸಿಹಿ ವಿತರಿಸಲಾಯಿತು.




ಮೈಸೂರು ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಿ.ಮಂಜುಗೌಡ ಇನ್ನಿತರರು ಜಿಟಿಡಿಯವರನ್ನು ಅಭಿನಂದಿಸಿದರು.





ಹಿರಿಯ ವಕೀಲರಾದ ಹರೀಶ್‌ಕುಮಾರ್ ಹೆಗ್ಡೆ, ಲಾಗೈಡ್ ವೆಂಕಟೇಶ್ ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು. ಬಲಚಿತ್ರದಲ್ಲಿ ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮಾಜಿ ಸದಸ್ಯ ಶಿವಣ್ಣ ಮತ್ತಿತರರು ಜಿಟಿಡಿಯವರಿಗೆ ಪುಷ್ಪಗುಚ್ಛ ನೀಡಿದರು.




ಜಯಪುರದ ಎಸ್.ಆರ್.ವೈನ್ಸ್ ಹಾಗೂ ತಳೂರು ಸರ್ಕಲ್‌ನ ಎಸ್‌ಡಿ ವೈನ್ಸ್ ಮಾಲೀಕ ಎಸ್.ಶ್ರೀಕಾಂತ್ ಅವರು ಜಿಟಿಡಿಯವರಿಗೆ ಗುಲಾಬಿ ಹಾರ ಅರ್ಪಿಸಿ, ಅಭಿನಂದಿಸಿದರು. ಚಿತ್ರದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ತಾಪಂ ಮಾಜಿ ಸದಸ್ಯ ಜೆ.ಎಂ.ಜವರನಾಯಕ ಇನ್ನಿತರರಿದ್ದಾರೆ.



ದಿ. ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ರೇವಣ್ಣ ನೇತೃತ್ವದಲ್ಲಿ ಬ್ಯಾಂಕಿನ ನಿರ್ದೇಶಕರು ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು.



ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಸಾಹುಕಾರಹುಂಡಿ ಗೋಪಾಲಸ್ವಾಮಿ, ಎಳನೀರು ಜಯರಾಂ ಜಿಟಿಡಿಯವರನ್ನು ಅಭಿನಂದಿಸಿದರು.



ಹೆಚ್.ಡಿ.ಕುಮಾರಸ್ವಾಮಿ ಮತ್ತು ಜಿ.ಟಿ. ದೇವೇಗೌಡ ಅಭಿಮಾನಿಗಳ ಸಂಘದ ಅಧ್ಯಕ್ಷ ಶರಾವತಿ ವೆಂಕಟೇಶ್, ಬಂಡೀಪಾಳ್ಯ ಗಿರಿ ಜಿಟಿಡಿಯವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.11.2022 ಶನಿವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ತೃತೀಯ, ನಕ್ಷತ್ರ : ಮೂಲ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ವಿಶ್ವಪ್ರಜ್ಞ ವಿದ್ಯಾಸಂಸ್ಥೆ :** ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥ ಅಂತರ ಶಾಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಜಾನಪದ ಗೀತೆ ಮತ್ತು ಭಾವಗೀತೆ ಸ್ಪರ್ಧೆ, ಸ್ಥಳ: ಸಂಸ್ಥೆಯ ಆವರಣ, ಬೆಳಗ್ಗೆ 9ಕ್ಕೆ

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಅಂತರ ಕಾಲೇಜು ಸ್ಪರ್ಧೆಗಳು, ಬೆಳಗ್ಗೆ 9.30ಕ್ಕೆ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ, ಅಧ್ಯಕ್ಷತೆ : ಚಾ.ನಗರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ. ಶೈಲಕುಮಾರ್, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಬಿ.ಆರ್. ನೀಲಕಂಠ, ಉಪ ಪ್ರಾಂಶುಪಾಲರಾದ ಶ್ರೀಮತಿ ಎಂ.ಎಸ್. ವಿಜಯ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಬೆಳಗ್ಗೆ 9.30ಕ್ಕೆ ಅಂತರ ಕಾಲೇಜು ಭಾವಗೀತೆ ಸ್ಪರ್ಧೆ, ಬೆಳಗ್ಗೆ 9.30ಕ್ಕೆ ಥ್ರೋಬಾಲ್ ಪಂದ್ಯಾವಳಿ, ಉದ್ಘಾಟನೆ : ಕಾಲೇಜು ಪ್ರಿನ್ಸಿಪಾಲ್ ಬಿ.ಆರ್. ನೀಲಕಂಠ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಉಲ್ಲಾಸ್ ಕೃಷ್ಣ, ಉಪಸ್ಥಿತರು : ಶ್ರೀಮತಿ ಎಂ.ಎಸ್. ವಿಜಯ, ಶ್ರೀಮತಿ ಮಂಗಳ ಮುದ್ದುಮಾದಪ್ಪ, ಬೆಳಗ್ಗೆ 9.30ಕ್ಕೆ ಖೋ ಖೋ ಪಂದ್ಯಾವಳಿ, ಮಧ್ಯಾಹ್ನ 2.30ಕ್ಕೆ ಬಹುಮಾನ ವಿತರಣಾ ಸಮಾರಂಭ, ಕಾಲೇಜು ಆವರಣ.

■ **ಚಾಲೆಂಜರ್ಸ್ ಅಕಾಡೆಮಿ ಮೈಸೂರು, ಪರಿವರ್ತನ ಪ್ರಥಮ ದರ್ಜೆ ಕಾಲೇಜು :** ಚಾಲೆಂಜರ್ಸ್ ಕಪ್–2022, ಅಂತರ ರಾಜ್ಯ ಪದವಿ ಕಾಲೇಜು ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್, ಸ್ಥಳ: ಮೈಸೂರು ವಿವಿ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ, ಯುವರಾಜ ಕಾಲೇಜು ಎದುರು, ಬೆಳಗ್ಗೆ 10 ರಿಂದ.

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಉದ್ಘಾಟನೆ : ಲೇಖಕ ಅಬ್ದುಲ್ ರಶೀದ್, ಮುಖ್ಯ ಅತಿಥಿಗಳು: ಜನಪದ ಕಲಾವಿದರಾದ ನಿಂಗಮ್ಮ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಡಿ. ರವಿ, ಸ್ಥಳ: ಕಾಲೇಜಿನ ಕಲಾ ಮಂಟಪ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ವಿದ್ಯಾಸಂಸ್ಥೆಗಳು :** ಸಂವಿಧಾನ ದಿನಾಚರಣೆ, ಉದ್ಘಾಟನೆ : ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್. ರಘುನಾಥ್, ಮುಖ್ಯ ಅತಿಥಿಗಳು : ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹಾದೇವಸ್ವಾಮಿ, ಕಾರ್ಯದರ್ಶಿ ಎಸ್. ಉಮೇಶ್, ಅಧ್ಯಕ್ಷತೆ : ಶಾರದಾ ವಿಲಾಸ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ

■ **ಸರಸ್ವತಿಪುರಂ ಕನ್ನಡ ಗೆಳೆಯರ ಬಳಗ:** ರಾಜ್ಯೋತ್ಸವ ಸಂಭ್ರಮ, ಸರಸ್ವತಿಪುರಂ ಬಡಾವಣೆ ಮಹಿಳೆಯರಿಗಾಗಿ ರಂಗೋಲಿ ಬಿಡಿಸುವ ಸ್ಪರ್ಧೆ, ಸ್ಥಳ: ಕೆ. ಜವರೇಗೌಡ ಉದ್ಯಾನವನ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಪ್ರೊ. ಪದ್ಮಿನಿ ಹೆಗಡೆ ವಿರಚಿತ ಸತ್ಯಾಯನ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಕೃತಿ ಕುರಿತು ಮಾತನಾಡುವವರು : ಪ್ರಾಧ್ಯಾಪಕರಾದ ಪ್ರೊ. ಕವಿತಾ ರೈ, ಅಧ್ಯಕ್ಷತೆ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಪ್ರಕಾಶಕ ಯು.ಎಸ್. ಮಹೇಶ್, ವಿಶ್ರಾಂತ ಪ್ರಾಂಶುಪಾಲರಾದ ಪ್ರೊ. ಪದ್ಮಿನಿ ಹೆಗಡೆ, ಕವಿ ಪ್ರೊ. ಗಜಾನನ ಈಶ್ವರ ಹೆಗಡೆ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮ:** ಸಹಕಾರಿ ಸಂಘಗಳ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ, ಸ್ಥಳ: ಧರ್ಮಸ್ಥಳ ಟ್ರಸ್ಟ್, ಮಾನವ ಸಂಪನ್ಮೂಲ ತರಬೇತಿ ಕೇಂದ್ರ, ಕಳಸ್ತವಾಡಿ, ಬೆಳಗ್ಗೆ 10.30ಕ್ಕೆ

■ **ಸಿಎಸ್‌ಐಆರ್–ಸಿಎಫ್‌ಟಿಆರ್‌ಐ, ಎಸ್‌ಸಿ, ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್:** ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು : ಸಾಮಾಜಿಕ ಕಾರ್ಯಕರ್ತ ಶಿವಸುಂದರ್, ಅಧ್ಯಕ್ಷತೆ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ಚೆಲುವಾಂಬ ಸಭಾಂಗಣ, ಸಿಎಫ್‌ಟಿಆರ್‌ಐ, ಬೆಳಗ್ಗೆ 10.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕುರುಕ್ಷೇತ್ರ ಅಥವಾ ಶ್ರೀ ಕೃಷ್ಣ ಸಂಧಾನ ಪೌರಾಣಿಕ ನಾಟಕ ಪ್ರದರ್ಶನ, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಸಾ.ರಾ. ಮಹೇಶ್, ಸಿ.ಎಸ್. ಪುಟ್ಟರಾಜು, ಸಿ.ಎನ್. ಮಂಜೇಗೌಡ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು: ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಕೆ.ವಿಶ್ವನಾಥ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ಮರೀಗೌಡ, ಉಪಸ್ಥಿತರು : ಡಾ. ಬಿ.ಟಿ. ರಘು, ಸ್ಥಳ: ಎಂ.ಕಾಂ. ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ದಿನಾಚರಣೆ ಪ್ರಯುಕ್ತ ಭಾರತೀಯ ಸಂವಿಧಾನ ಮತ್ತು ಸಾಮಾಜಿಕ ಪರಿವರ್ತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ. ಹೆಚ್. ರಾಜಶೇಖರ್, ವಿಶೇಷ ಉಪನ್ಯಾಸ : ಕಾರ್ಮಿಕ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಬಾಬು ಮ್ಯಾಥ್ಯು, ಉಪಸ್ಥಿತರು : ಡಾ.ಬಿ.ಆರ್. ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಇಂದಿರಾ, ಪ್ರಾಧ್ಯಾಪಕ ಪ್ರೊ. ಜೆ. ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಪರಮಪೂಜ್ಯ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರ ಒಕ್ಕಲಿಗರ ಸಂಘ :** ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ನಾಗರಿಕರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮಾಜಿ ಶಾಸಕ ವಾಸು, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಮೊಗಣ್ಣೇಗೌಡ, ಸ್ಥಳ: ಸಂಘದ ಆವರಣ, ಎಸ್‌ಜೆಸಿಇ ಕಾಲೇಜು ಹತ್ತಿರ, ಹುಣಸೂರು ರಸ್ತೆ, ಬೆಳಗ್ಗೆ 11.30ಕ್ಕೆ.

■ **ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ :** ಕನ್ನಡ ರಾಜ್ಯೋತ್ಸವ ಸಮಿತಿ, ಕನಕ ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಸಾಹಿತಿ ಕಳಲೆ ಜವರನಾಯಕ, ಪಡುವಾರಹಳ್ಳಿ ರಾಮಕೃಷ್ಣ ಅವರಿಗೆ ಸನ್ಮಾನ, ಸ್ಥಳ: ರಾಜಶೇಖರ ಕೋಟಿ ಸಭಾಂಗಣ, ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ

■ **ಮಾರ್ವೆಲ್ ಪಿಯು ಕಾಲೇಜು :** ಕನ್ನಡ ರಾಜ್ಯೋತ್ಸವ ಅಂಗವಾಗಿ ವಿಶೇಷ ಉಪನ್ಯಾಸ ಮಾಲಿಕೆ ಉಪನ್ಯಾಸಕ ಎ.ಎಸ್. ಗೋವಿಂದೇಗೌಡ ಅವರಿಂದ, ಪ್ರಾಸ್ತಾವಿಕ ನುಡಿ : ಪ್ರಾಧ್ಯಾಪಕ ಡಿ. ಕಾಳೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಎ. ಪೆರಿಯನಾಯಗಂ, ಸ್ಥಳ: ಮಾರ್ವೆಲ್ ಪಿಯು ಕಾಲೇಜು, ಲಲಿತಾದ್ರಿನಗರ, ಮ. 1.20 ಗಂಟೆಗೆ

■ **ಇಂಡಿಯನ್ ನ್ಯಾಷನಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಫಾರೆಸ್ಟ್ ಅಂಡ್ ವುಡ್ ವರ್ಕರ್ಸ್ ಫೆಡರೇಷನ್:** ಮೈಸೂರು ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭ, ಉದ್ಘಾಟನೆ : ಮಾಜಿ ಸಂಸದ ಆರ್. ಧ್ರುವನಾರಾಯಣ್, ಅಧ್ಯಕ್ಷತೆ : ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಸ್ಥಳ: ರೋಟರಿ ಹಾಲ್, ಮುಡಾ ಕಚೇರಿ ಎದುರು, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–751, ಕಥೆ ಹೇಳುವವರು: ಮಹರ್ಷಿ ಪದವಿಪೂರ್ವ ಕಾಲೇಜು ಸಂಸ್ಕೃತ ಉಪನ್ಯಾಸಕರಾದ ವಿದ್ವಾನ್ ನಾರಾಯಣ ದೇಸಾಯಿ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಮಂಥನ, ಮೈಸೂರು ವೈಚಾರಿಕ ವೇದಿಕೆ :** ಅಂಕಣಕಾರ ರೋಹಿತ್ ಚಕ್ರವರ್ತಿ ಅವರಿಂದ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ–ಭಾರತೀಯ ಕಥನ ಕುರಿತು ಉಪನ್ಯಾಸ, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ವಿದುಷಿ ಕು. ಚಂದನ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಶ್ರವಂತ್–ಪಿಟೀಲು, ವಿದ್ವಾನ್ ಸುಧೀಂದ್ರ–ಮೃದಂಗ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಪಟ್ಟಾಭಿರಾಮ್ ಪಂಡಿತ್ ಅವರಿಂದ ಗಾಯನ, ವಿದುಷಿ ಸಿಂಧು ಸುಚೇತನ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ :** ವೀಣಾನಾದ ಸಂಭ್ರಮ, ಪ್ರಥಮ ವರ್ಷದ ಶಾರದಾ ವೀಣಾ ಮಹೋತ್ಸವ, ವಿದುಷಿ ಬಿ.ಕೆ. ವಿಜಯಲಕ್ಷ್ಮಿ ರಘು ಅವರಿಂದ ವೀಣಾವಾದನ, ವಿದ್ವಾನ್ ಎಸ್. ಕುಮಾರಸ್ವಾಮಿ–ಮೃದಂಗ, ವಿದ್ವಾನ್ ವಿ. ಶ್ಯಾಮ್–ಘಟ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ವಿವೇಕಾನಂದ ಕಂಪ್ಯೂಟರ್ ತರಬೇತಿ ಕೇಂದ್ರ, ನೇಸರ ಫೌಂಡೇಷನ್ :** ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ಉಪ ಪೊಲೀಸ್ ವರಿಷ್ಠಾಧಿಕಾರಿ ವಿ. ಗೋವಿಂದರಾಜು, ಮುಖ್ಯ ಭಾಷಣಕಾರರು : ರಾಜ್ಯ ಸಂಪನ್ಮೂಲ ವ್ಯಕ್ತಿ ಬಿ. ಬಾಲಕೃಷ್ಣಯ್ಯ, ಅಧ್ಯಕ್ಷತೆ : ಪಾಲಿಕೆ ಸದಸ್ಯೆ ಸುನಂದ ಪಾಲನೇತ್ರ, ಸ್ಥಳ: ವಿವೇಕಾನಂದ ಕಂಪ್ಯೂಟರ್ ತರಬೇತಿ ಕೇಂದ್ರ, ವಿವೇಕಾನಂದನಗರ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೆಡಿಕಲ್ ಸೀಟ್ ಕೊಡಿಸುವುದಾಗಿ 35 ಲಕ್ಷ ರೂ. ವಂಚನೆ: ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ ದಂಪತಿ ವಿರುದ್ಧ ಕೇಸ್

ಬೆಂಗಳೂರು,ನ.25–ಮೆಡಿಕಲ್ ಸೀಟ್ ಕೊಡಿಸುವುದಾಗಿ ಗುತ್ತಿಗೆದಾರರೊಬ್ಬರಿಂದ 35 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ಮೈಸೂರು ಜಿಲ್ಲೆಯಿಂದ ಆಯ್ಕೆ ಯಾಗಿರುವ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ. ಮಂಜೇಗೌಡ ಮತ್ತು ಅವರ ಪತ್ನಿ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ವಿವರ: ಬೆಂಗಳೂರಿನ ಹನುಮಂತ ನಗರ ನಿವಾಸಿಯಾಗಿರುವ ಗುತ್ತಿಗೆದಾರ ಕೆ.ಆರ್.ಶ್ರೀನಿವಾಸ್(58) ವಂಚನೆಗೊಳ ಗಾದವರಾಗಿದ್ದು, ಇವರ ಸಂಬಂಧಿಕರ ಪುತ್ರನಿಗೆ ನೀಟ್‌ನಲ್ಲಿ ಮೆಡಿಕಲ್ ಸೀಟ್ ಹಂಚಿಕೆಯಾಗದ ಕಾರಣ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆಯಲು ಅವರು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ. ಮಂಜೇಗೌಡನನ್ನು ಭೇಟಿ ಮಾಡಿದ್ದಾರೆ. ಮಂಜೇಗೌಡರು, ತಾವು ನರ್ಸಿಂಗ್ ಕಾಲೇಜ್ ಅಧ್ಯಕ್ಷರಾಗಿದ್ದು, ತಮ್ಮ ಗುಂಪಿನವರೇ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿರುವುದರಿಂದ ಅವರಿಗೆ ಹೇಳಿ ಕಿಮ್ಸ್ ಕಾಲೇಜಿನಲ್ಲಿ ಮೆಡಿಕಲ್ ಸೀಟ್ ಕೊಡಿಸುವುದಾಗಿ ತಿಳಿಸಿ 35 ಲಕ್ಷ ರೂ.ಗಳೊಂದಿಗೆ ಬೆಂಗಳೂರಿನ ಶಾಂಗ್ರೀಲಾ ಹೋಟೆಲ್‌ಗೆ ಬರುವಂತೆ ಹೇಳಿದ್ದಾರೆ. ಅದರಂತೆ ಶ್ರೀನಿವಾಸ್ ಅವರು ಮಾರ್ಚ್ 7ರಂದು 35 ಲಕ್ಷ ರೂ.ಗಳೊಂದಿಗೆ ಶಾಂಗ್ರೀಲಾ ಹೋಟೆಲ್‌ಗೆ ತೆರಳಿದಾಗ ಮಂಜೇಗೌಡರು ಮತ್ತು ಅವರ ಪತ್ನಿ ಶ್ರೀಮತಿ ಮೀನಾ ಅವರು ಹಣ ಪಡೆದುಕೊಂಡು 3 ದಿನ ಬಿಟ್ಟು ಒಕ್ಕಲಿಗರ ಸಂಘದ ಅಧ್ಯಕ್ಷರ ಕೊಠಡಿ ಬಳಿ ಬರುವಂತೆ ತಿಳಿಸಿದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅವರು ಹೇಳಿದಂತೆ ಒಕ್ಕಲಿಗರ ಸಂಘದ ಕಚೇರಿ ಬಳಿ ಹೋದಾಗ ಮಂಜೇಗೌಡರು ಮೆಡಿಕಲ್ ಸೀಟ್ ಕೊಡಿಸುವ ಸಂಬಂಧವಾಗಿಯೇ ತಾವು ಬಂದಿರುವುದಾಗಿ ಒಂದು ವಾರ ಬಿಟ್ಟು ಬರುವಂತೆಯೂ ಶ್ರೀನಿವಾಸ್ ಅವರಿಗೆ ಹೇಳಿದ್ದಾರೆ.

ನಂತರ ಕಿಮ್ಸ್ ಕಾಲೇಜಿನಲ್ಲಿ ಅಡ್ಮಿಷನ್ ಮುಗಿದಿರುವ ವಿಚಾರ ತಿಳಿದು ಮಂಜೇಗೌಡರನ್ನು ಭೇಟಿ ಮಾಡಲು ಪ್ರಯತ್ನಿಸಿ, ಅವರು ಸಿಗದೇ ಇದ್ದಾಗ ಶ್ರೀನಿವಾಸ್ ಅವರು ಮೈಸೂರಿನ ಜೆ.ಪಿ.ನಗರದಲ್ಲಿರುವ ಮಂಜೇಗೌಡರ ಮನೆಗೆ ಬಂದು ಮೆಡಿಕಲ್ ಸೀಟ್ ವಿಚಾರ ಮಾತನಾಡಿ, ಹಣವನ್ನು ವಾಪಸ್ ಕೇಳಿದಾಗ ಮಂಜೇ ಗೌಡರು, ಅವರ ಪತ್ನಿ ಶ್ರೀಮತಿ ಮೀನಾ, ಅವರ ಡ್ರೈವರ್ ಹಾಗೂ ಮತ್ತೊಬ್ಬ ಸೇರಿ ತಮಗೆ ಜೀವ ಬೆದರಿಕೆ ಹಾಕಿದರು ಎಂದು ನ.23ರಂದು ಶ್ರೀನಿವಾಸ್ ನೀಡಿದ ದೂರಿನನ್ವಯ ಹೈಗ್ರೌಂಡ್ಸ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 420, 341, 504, 506, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಐದನೇ ಪುಟದಿಂದ

‘ವಿಧಿವಿಜ್ಞಾನ’ ಪ್ರಬಲ ಅಸ್ತ್ರ

ಜೊತೆಗೆ ಅಪರಾಧ ತನಿಖೆ ಮತ್ತು ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ನ್ಯಾಯವನ್ನು ಬೆಂಬಲಿಸಿ ನಿಲ್ಲಲಿದೆ ಹಾಗಾಗಿ ನ್ಯಾಯಾಂಗದ ವ್ಯವಸ್ಥೆಯು ವಿಧಿವಿಜ್ಞಾನದ ವಿಶ್ಲೇಷಣೆಯನ್ನು ಅವಲಂಬಿಸಿದೆ. ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ ತನಿಖೆಗೆ ದಿಕ್ಕು ತೋರಿಸುವಲ್ಲಿ ವಿಧಿವಿಜ್ಞಾನ ಮಹತ್ವದ ಪಾತ್ರ ವಹಿಸಲಿದೆ. ಸಾಕ್ಷ್ಯ ಗುರುತಿಸುವುದು, ನಾಶಪಡಿಸಿದ ಸಾಕ್ಷ್ಯಗಳನ್ನು ಮರುಪಡೆಯುವುದು ಮತ್ತು ನಿಖರವಾದ ಮಾಹಿತಿ ಕಲೆ ಹಾಕುವ ಮೂಲಕ ಅಪರಾಧ ತನಿಖೆಯಲ್ಲಿ ವಿಧಿವಿಜ್ಞಾನವು ನ್ಯಾಯಾಂಗ ವ್ಯವಸ್ಥೆಗೆ ನೆರವಾಗಲಿದೆ ಎಂದು ತಿಳಿಸಿದರು. ವೈದ್ಯ ವೃತ್ತಿ ಉದಾತ್ತ ಮನೋಭಾವ ಅಪೇಕ್ಷಿಸಲಿದೆ. ರೋಗಿಯ ಆರೋಗ್ಯ ಕಾಪಾಡುವಲ್ಲಿ ವೈದ್ಯರು ಮಹತ್ತರ ಜವಾಬ್ದಾರಿ ಹೊಂದಿರುತ್ತಾರೆ. ವೈದ್ಯಕೀಯ ಕ್ಷೇತ್ರದ ವೃತ್ತಿಪರರು ಕಾಲಕಾಲಕ್ಕೆ ತಮ್ಮ ವೃತ್ತಿ ಕ್ಷೇತ್ರದ ಮುಂದುವರೆದ ಜ್ಞಾನವನ್ನು ಪಡೆದುಕೊಳ್ಳುವುದು ಅಗತ್ಯ. ಕಾನೂನು ಮತ್ತು ನ್ಯಾಯಾಂಗಕ್ಕೆ ವೈದ್ಯರ ಜ್ಞಾನ ಮತ್ತು ಸೇವೆ ಅಗತ್ಯವಿದ್ದು, ಪ್ರತಿಯೊಬ್ಬ ವೈದ್ಯರು ಈ ಅಂಶ ಗಮನದಲ್ಲಿ ಇಟ್ಟು ಕೊಳ್ಳಬೇಕು ಎಂದು ಸಲಹೆ ನೀಡಿದರು.

ನ್ಯಾಯಾಂಗಕ್ಕೆ ನೆರವಾಗುವುದು ವೈದ್ಯರ ಹೊಣೆ: ನ್ಯಾಯದಾನ ಮಾಡಲು ನ್ಯಾಯಾಂಗಕ್ಕೆ ನೆರವಾಗುವುದು ವೈದ್ಯರ ಜವಾಬ್ದಾರಿ. ತಮ್ಮ ಸಮಾಜದ ಜನತೆಯ ಆರೋಗ್ಯ ಕಾಪಾಡುವುದೂ ವೈದ್ಯರ ಪ್ರಾಥಮಿಕ ಕರ್ತವ್ಯವಾಗಿದೆ. ಅಪರಾಧ ತನಿಖೆಯಲ್ಲಿ ವೈಜ್ಞಾನಿಕ ಉಪಕರಣಗಳು ಮತ್ತು ತಂತ್ರಗಳ ಬಳಕೆಯು ನ್ಯಾಯ ವಿತರಣೆಗೆ ಸಹಾಯಕವಾಗಲಿವೆ. ಕಲೆ ಹಾಕುವ ಸಾಕ್ಷ್ಯಾಧಾರಗಳು ಸೂಕ್ತವಾಗಿದ್ದರೆ, ಮುಗ್ಧರನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗಲಿದೆ. ಅಂತೆಯೇ ಅಪರಾಧ ಸಾಬೀತುಪಡಿಸಲು ಸುಲಭ ಸಾಧ್ಯವಾಗುವ ಜೊತೆಗೆ ಮುಂದಿನ ಕಾನೂನು ಕ್ರಮ ಜರುಗಿಸಲು ನೆರವಾಗಲಿದೆ ಎಂದು ತಿಳಿಸಿದರು.

ವಿಧಿವಿಜ್ಞಾನದಿಂದ ನಿರ್ಣಾಯಕ ಪಾತ್ರ: ಪ್ರಸ್ತುತ ಅಪರಾಧ ಪ್ರಕರಣಗಳು ಎಲ್ಲಾ ಅಡೆತಡೆಗಳನ್ನು ದಾಟಿ ವ್ಯಾಪಕವಾಗಿ ಮುಂದುವರೆಯುತ್ತಿವೆ. ಅಪರಾಧ ಪ್ರಕರಣಗಳಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಗಳ ವಿಶ್ಲೇಷಣೆ ಹಾಗೂ ಅವುಗಳ ಫಲಿತಾಂಶವು ನ್ಯಾಯ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ ಎಂದರು.

ಈ ರೀತಿಯ ಸಮ್ಮೇಳನಗಳ ಮೂಲಕ ವೈದ್ಯರು ತಮ್ಮ ಜ್ಞಾನವನ್ನು ಪ್ರಸ್ತುತಕ್ಕೆ ತಕ್ಕಂತೆ ವೃದ್ಧಿಸಿಕೊಳ್ಳಬೇಕು. ಇಂತಹ ಸಮ್ಮೇಳನಗಳು ಕೌಶಲ ಬೆಳೆಸಲು ಸಹಕಾರಿಯಾಗಲಿವೆ. ಜೊತೆಗೆ ಅಪರಾಧ ತನಿಖೆಯ ವೃತ್ತಿಪರರಲ್ಲಿ ಸಂಪರ್ಕ ನಿರ್ಮಿಸಲಿವೆ. ಆ ಮೂಲಕ ಪರಸ್ಪರರು ಜ್ಞಾನ ವಿನಿಮಯದೊಂದಿಗೆ ತಮ್ಮ ವೃತ್ತಿ ಕ್ಷೇತ್ರದಲ್ಲಿ ಉನ್ನತ ಬದಲಾವಣೆ ತರಲು ಸಾಧ್ಯವಾಗಲಿದೆ. ಪಕ್ಷಪಾತಕ್ಕೆ ಅವಕಾಶ ವಿಲ್ಲದ ಕಾರಣ ವಿಧಿವಿಜ್ಞಾನದ ಸಾಕ್ಷ್ಯಗಳನ್ನು ನ್ಯಾಯಾಂಗ ವ್ಯವಸ್ಥೆ ಪರಿಗಣಿಸಲಿದೆ. ವಿಧಿವಿಜ್ಞಾನ ತಂತ್ರಜ್ಞಾನಗಳು ತನಿಖಾ ವ್ಯವಸ್ಥೆ ಸಮರ್ಥವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಿವೆ ಎಂದು ನ್ಯಾಯ ಮೂರ್ತಿ ಕೆ.ಎನ್.ಫಣೀಂದ್ರ ತಿಳಿಸಿದರು. ಅಪರಾಧ ಪ್ರಕರಣಗಳ ವೈಜ್ಞಾನಿಕ ತನಿಖೆಯಲ್ಲಿ ಸಕ್ರಿಯವಾಗಿರುವ ವಿವಿಧ ವೃತ್ತಿಪರರು ಮತ್ತು ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ರಾಜಸ್ಥಾನ ಸೇರಿದಂತೆ ವಿವಿಧ ಭಾಗಗಳ 200ಕ್ಕೂ ಹೆಚ್ಚು ವಿಧಿವಿಜ್ಞಾನ ತಜ್ಞರು, ತನಿಖಾಧಿಕಾರಿಗಳು ಮತ್ತು ಸಂಶೋಧಕರು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಸುರೀಂದರ್ ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿ ಅಧ್ಯಕ್ಷ ಹಾಗೂ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಅರುಣ್, ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿ ಖಜಾಂಚಿ ಡಾ.ಸ್ಮಿತಾರಾಣಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಹೆಚ್.ವಿ. ಚಂದ್ರಕಾಂತ್ ಮತ್ತಿತರರು ಹಾಜರಿದ್ದರು.

ಚಾಮರಾಜ ಕ್ಷೇತ್ರದ ಮಳೆ ನೀರು ಚರಂಡಿ ಅಭಿವೃದ್ಧಿಗೆ ಸರ್ಕಾರದಿಂದ 15 ಕೋಟಿ ಅನುದಾನ ಬಿಡುಗಡೆ

- 1.50 ಕೋಟಿ ವೆಚ್ಚದಲ್ಲಿ ಕುಂಬಾರಕೊಪ್ಪಲು ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿ ಶೀಘ್ರ ಆರಂಭ
- ಪಾದಯಾತ್ರೆಯಲ್ಲಿ ಸಾರ್ವಜನಿಕರ ಕುಂದು–ಕೊರತೆ ಆಲಿಸಿದ ಶಾಸಕ ಎಲ್.ನಾಗೇಂದ್ರ ಭರವಸೆ



> ಕುಂಬಾರಕೊಪ್ಪಲು ಗ್ರಾಮಕ್ಕೆ ಕಳೆದ 50 ವರ್ಷಗಳಿಗೆ ಹೋಲಿಸಿದರೆ ನನ್ನ ಅವಧಿಯಲ್ಲಿ ಹೆಚ್ಚು ಅನುದಾನ ಕಲ್ಪಿಸಿ, ಅಭಿವೃದ್ಧಿ ಕೈಗೊಳ್ಳಲಾಗಿದೆ. ಕುಂಬಾರಕೊಪ್ಪಲು, ಕನ್ನೇಗೌಡನಕೊಪ್ಪಲು, ಒಂಟಿಕೊಪ್ಪಲು, ಮಂಚೇಗೌಡನ ಕೊಪ್ಪಲು, ಪಡುವಾರಹಳ್ಳಿ, ಮೇಟಗಳ್ಳಿ ಸೇರಿದಂತೆ ನನ್ನ ಕ್ಷೇತ್ರದಲ್ಲಿ 6 ಗ್ರಾಮೀಣ ಹಿನ್ನೆಲೆಯ ಪ್ರದೇಶಗಳಿವೆ. ಈ ಎಲ್ಲವಕ್ಕೂ ಹೆಚ್ಚು ಅನುದಾನ ಕಲ್ಪಿಸಿ, ಅಭಿವೃದ್ಧಿಗೆ ಸಹಕರಿಸಿದ್ದೇನೆ. ಅಂತೆಯೇ ಹೊಸ ಬಡಾವಣೆಗಳನ್ನು ಸರಿಸಮನಾಗಿ ಅಭಿವೃದ್ಧಿಪಡಿಸಲು ಶ್ರಮಿಸಿದ್ದೇನೆ.
> -ಶಾಸಕ ಎಲ್.ನಾಗೇಂದ್ರ

ಮೈಸೂರು,ನ.25(ಪಿಎಂ)– ಚಾಮರಾಜ ಕ್ಷೇತ್ರದ ಮಳೆ ನೀರು ಚರಂಡಿ ಅಭಿವೃದ್ಧಿಗೆ ಎಸ್‌ಎಫ್‌ಸಿ ವಿಶೇಷ ಅನುದಾನದಡಿ 15 ಕೋಟಿ ರೂ.ಗಳನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದು, ಇದರಲ್ಲಿ 1.50 ಕೋಟಿ ರೂ. ವೆಚ್ಚದಲ್ಲಿ ಕುಂಬಾರಕೊಪ್ಪಲು ವ್ಯಾಪ್ತಿಯ ಮಳೆ ನೀರು ಚರಂಡಿ ಅಭಿವೃದ್ಧಿಗೆ ಶೀಘ್ರ ಕಾಮಗಾರಿ ಆರಂಭಗೊಳ್ಳಲಿದೆ ಎಂದು ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯ ಪಾಲಿಕೆ ವಾರ್ಡ್ 5ರ ಕುಂಬಾರಕೊಪ್ಪಲಿನ ವಿವಿಧ ಭಾಗಗಳಲ್ಲಿ ಶುಕ್ರವಾರ ಪಾದಯಾತ್ರೆ ನಡೆಸಿ, ಸಾರ್ವಜನಿಕರ ಕುಂದು ಕೊರತೆ ಆಲಿಸಿ, ಸ್ಥಳದಲ್ಲೇ ಪರಿಹಾರಕ್ಕೆ ಕ್ರಮ ಕೈಗೊಂಡರು.

ಈ ವೇಳೆ ಮಳೆ ನೀರು ಚರಂಡಿಯ ಅಕ್ಕಪಕ್ಕದ ಮನೆಗಳಿಗೆ ಮಳೆಯಾದ ಸಂದರ್ಭದಲ್ಲಿ ನೀರು ನುಗ್ಗುವಂತಾಗಿದೆ. ಯುಜಿಡಿ ನೀರನ್ನು ಇದೇ ಚರಂಡಿಗೆ ಬಿಟ್ಟಿರುವ ಕಾರಣ ಸಾಕಷ್ಟು ಕಿರಿಕಿರಿ ಅನುಭವಿಸುವಂತಾಗಿದೆ ಎಂದು ಸಾರ್ವಜನಿಕರು ಶಾಸಕರಲ್ಲಿ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಇಡೀ ಕ್ಷೇತ್ರದ ಮಳೆ ನೀರು ಚರಂಡಿ ಅಭಿವೃದ್ಧಿಗೆ ಅನುದಾನ ನೀಡಿದ್ದಾರೆ. ಈ ಅನುದಾನದಲ್ಲಿ ಸೂರ್ಯ ಬೇಕರಿಯಿಂದ ಜಯದೇವ ಆಸ್ಪತ್ರೆವರೆಗೆ ಕುಂಬಾರಕೊಪ್ಪಲಿನಲ್ಲಿ ಹಾದು ಹೋಗಿರುವ ಚರಂಡಿಯ ಅಭಿವೃದ್ಧಿ ಕಾಮಗಾರಿ ಶೀಘ್ರ ಆರಂಭಿಸಲಾಗುವುದು ಎಂದು ತಿಳಿಸಿದರು.


ಸಾರ್ವಜನಿಕರ ಮನವಿ ಮೇರೆಗೆ ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸುವಂತೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಪಶು ಆಸ್ಪತ್ರೆ ಸಿಬ್ಬಂದಿ ವಿರುದ್ಧ ಗರಂ ಆದ ಶಾಸಕರು: ಕುಂಬಾರಕೊಪ್ಪಲು ಪಶು ಆಸ್ಪತ್ರೆಯಲ್ಲಿ ಜಾನುವಾರುಗಳ ಚಿಕಿತ್ಸೆಗೆ ಅಗತ್ಯ ಪ್ರಮಾಣದ ಔಷಧಿ ನೀಡದೇ ಹೊರಗೆ ಖರೀದಿಸುವಂತೆ ಚೀಟಿ ಬರೆಯಲಾಗುತ್ತಿದೆ. ಅಲ್ಲದೆ, ಕೆಲ ಸಿಬ್ಬಂದಿ ದರ್ಪದಿಂದ ನಡೆದುಕೊಳ್ಳುವ ಬಗ್ಗೆ ಸಾರ್ವಜನಿಕರು ಶಾಸಕರಲ್ಲಿ ದೂರಿದರು. ಇದರಿಂದ ಗರಂ ಆದ ಶಾಸಕರು, ಸ್ಥಳದಲ್ಲಿದ್ದ ಪಶು ಆಸ್ಪತ್ರೆಯ ಸಿಬ್ಬಂದಿಗೆ ಹರಿಹಾಯ್ದರಲ್ಲದೆ, ಇನ್ನು ಮುಂದೆ ಈ ರೀತಿಯಲ್ಲಿ ಸಾರ್ವಜನಿಕರೊಂದಿಗೆ ದೂರು ಬರದಂತೆ ನಡೆದುಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಟ್ರಾನ್ಸ್‌ಫಾರ್ಮರ್ ಸ್ಥಳಾಂತರಕ್ಕೆ ಸೂಚನೆ: ಕುಂಬಾರಕೊಪ್ಪಲಿನಲ್ಲಿ ಸುಮಾರು 15 ಕಂಬಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು. ಅಲ್ಲದೆ, ಇಲ್ಲಿನ ನರ್ಮ್ ಮನೆಗಳ ಸಂಕೀರ್ಣದಲ್ಲಿ ಸಮೀಪ ಸ್ಥಾಪಿಸಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನಿಂದ ಸಂಚಾರಕ್ಕೆ ತೊಂದರೆ ಎಂದು ಸ್ಥಳೀಯರು ತಿಳಿಸಿದಾಗ, ಪಕ್ಕಕ್ಕೆ ಸ್ಥಳಾಂತರಿಸಲು ಅಂದಾಜು ಪಟ್ಟಿ ಸಿದ್ಧಪಡಿಸಿ, ಪಾಲಿಕೆಯಿಂದ ಹಣ ಬಿಡುಗಡೆ ಮಾಡಿಸಿಕೊಳ್ಳುವಂತೆ ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಾಲಿಕೆ ಸದಸ್ಯೆ ಉಷಾ ಕುಮಾರ್, ಪಾಲಿಕೆ ಉಪ ಆಯುಕ್ತ ಮಹೇಶ್, ಸಹಾಯಕ ಆಯುಕ್ತ ಕೃಷ್ಣ, ಅಭಿವೃದ್ಧಿ ಅಧಿಕಾರಿ ಮನುಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರಗೌಡ, ಪ್ರಧಾನ ಕಾರ್ಯದರ್ಶಿ ಪುನೀತ್, ಪಕ್ಷದ ಮುಖಂಡ ದಿನೇಶ್‌ಗೌಡ, ವಾರ್ಡ್ ಅಧ್ಯಕ್ಷ ನರಸಿಂಹ, ಕಾರ್ಯದರ್ಶಿ ಮೋಹನ್, ಆರಾಧನಾ ಸಮಿತಿ ಸದಸ್ಯ ಭೈರಪ್ಪ, ಮುಖಂಡ ಅಶ್ವಥ್ ಬಸವೇಗೌಡ, ಯುವ ಮೋರ್ಚಾದ ಮುಖಂಡರಾದ ಪ್ರಮೋದ, ಪ್ರವೀಣ್, ಜಯರಾಮ್, ನವೀನ್, ಕದಂಬ ಸತೀಶ್, ನರಸೇಗೌಡ, ಮಂಜಪ್ಪ, ಪದ್ಮಶ್ರೀ, ಸರ್ವೇಶ್, ಕಿರಣ್, ನಾಗ, ಜಯಣ್ಣ, ಅಶೋಕ, ಜಯಪ್ಪ, ಕೀರ್ತಿ, ಚಲುವ, ಮಂಜು ಮತ್ತಿತರರು ಹಾಜರಿದ್ದರು.

ಕಾಂಗ್ರೆಸ್ ಸಭೆಯಲ್ಲೇ ಹೃದಯಾಘಾತ: ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರು ಇನ್ನಿಲ್ಲ



ಬೆಂಗಳೂರು, ನ.25– ಬೀದರ್ ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಖಾಸಗಿ ರೆಸಾರ್ಟ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಟಿಕೆಟ್ ಆಕಾಂಕ್ಷಿಗಳ ಸಭೆ ನಡೆಯುವಾಗಲೇ ಶ್ರೀಶೈಲಪ್ಪ ಕುಸಿದು ಬಿದ್ದಿದ್ದು, ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಭೆ ಆರಂಭವಾಗುತ್ತಿದ್ದಂತೆ ಕುಸಿದು ಬಿದ್ದು ಶ್ರೀಶೈಲಪ್ಪ ವಾಂತಿ ಮಾಡಿಕೊಂಡಿದ್ದರು. ಕಾರಿನಿಂದ ಇಳಿದು ಒಳಗೆ ಹೋಗುವಾಗಲೇ ಶ್ರೀಶೈಲಪ್ಪ ಸುಸ್ತಾಗಿದ್ದರು. ಬೆಳಿಗ್ಗೆ ತಿಂಡಿ ತಿನ್ನದೇ ಶ್ರೀಶೈಲಪ್ಪ ಬಿದರೂರು ಸಭೆಗೆ ಆಗಮಿಸಿದ್ದರು ಎನ್ನಲಾಗುತ್ತಿದೆ.

ಇಂದು ಆಯೋಜನೆಯಾಗಿದ್ದ ಕಾಂಗ್ರೆಸ್ ಸಭೆಯನ್ನು ರದ್ದು ಮಾಡಲಾಗಿದ್ದು, ರೆಸಾರ್ಟ್‌ನಲ್ಲಿ ಶ್ರದ್ಧಾಂಜಲಿ ಸಭೆ ನಡೆಸಿ ಸಂತಾಪ ಸೂಚಿಸಲಾಯಿತು.

ನ. 28 ರಂದು ಸಾಮಾನ್ಯ ಕೌನ್ಸಿಲ್ ಸಭೆ

ಮೈಸೂರು, ನ.25– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನವೆಂಬರ್ 28ರಂದು ಸೋಮವಾರ ಪೂರ್ವಾಹ್ನ 11 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ನವೆಂಬರ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌರವಾನ್ವಿತ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು, ಉಪವಿಭಾಗ, ಹುಣಸೂರು.

ಆರ್.ಎ. 129/2022

ಮೇಲ್ಮನವಿದಾರರು : ಪರಶುರಾಮೇಗೌಡ.ಬಿ.ಸಿ.

ವಿರುದ್ಧ

ಎದುರುದಾರರು : ತಹಸೀಲ್ದಾರ್ ಹುಣಸೂರು ತಾಲ್ಲೂಕು ಮತ್ತು ಮತ್ತೊಬ್ಬರು.

ಗೆ,
ಪುಟ್ಟೇಗೌಡ, ಅತ್ತಿಗುಪ್ಪೆ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ ಅರ್ಜಿದಾರರು ಎದುರುದಾರರ ವಿರುದ್ಧ 1ನೇ ಎದುರುದಾರರು ಹುಣಸೂರು ತಾಲ್ಲೂಕು, ಗಾವಡಗೆರೆ ಹೋಬಳಿ, ಅತ್ತಿಗುಪ್ಪೆ ಗ್ರಾಮದ ಸ.ನಂ.134/1ಎ ರಲ್ಲಿ ವಿಸ್ತೀರ್ಣ 2–31 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯಲ್ಲಿನ ಕಲಂ 9 ಮತ್ತು 12 ರಲ್ಲಿ ನಮೂದಾಗಿರುವ ಹೆಸರಿನ ತಿದ್ದುಪಡಿಗೆ ಸಂಬಂಧಿಸಿದಂತೆ ಎಂ.ಆರ್.ಹೆಚ್. 34/2018–19 ದಿನಾಂಕ: 18–06–2019 ರಂದು ಮಾಡಿರುವ ಆದೇಶವನ್ನು ತಿದ್ದುಪಡಿ ಮಾಡಲು 1ನೇ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು. ಸದರಿ ಅರ್ಜಿಗೆ 1ನೇ ಎದುರುದಾರರು ದಿನಾಂಕ: 16–10–2021 ರಂದು ನೀಡಿರುವ ಹಿಂಬರಹವನ್ನು ಪ್ರಶ್ನಿಸಿ ಈ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆ ಇದ್ದಲ್ಲಿ ಸದರಿ ವ್ಯಕ್ತಿಯು ಖುದ್ದಾಗಿ ಆಗಲೀ ಅಥವಾ ಅವರ ವಕೀಲರ ಮೂಲಕ ದಿನಾಂಕ: 02–01–2023 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗುವುದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ನಿಯಮಾನುಸಾರವಾಗಿ ಇತ್ಯರ್ಥಪಡಿಸಲಾಗುವುದು. ನ್ಯಾಯಾಲಯದ ಆದೇಶದ ಮೇರೆಗೆ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 25–11–2022 ರಂದು ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಅರ್ಜಿದಾರರಪರ ವಕೀಲರು
ಸಹಿ/– ಎಂ.ಆರ್.ಹರೀಶ್
ವಕೀಲರು, ಹುಣಸೂರು

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರ ರವರು
ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು.

